# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶುಕ್ರವಾರ, ಫೆಬ್ರವರಿ 14, 2025

ಸಂಪುಟ : 51 ಸಂಚಿಕೆ : 273 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



WANTED

Full Time Accountant with 3 years Experience in Tally Accounting

Apply with Bio-Data Immediately.

SHANTALA

CHAMARAJPET, DAVANGERE.

96861 95328

96861 95323



Narayana Health

ಆರ್ಥೋ ಕೇರ್


ಶಿವಮೊಗ್ಗದ ಸಹ್ಯಾದ್ರಿ ನಾರಾಯಣ ಆಸ್ಪತ್ರೆಯ ಕೀಲು ಮೂಳೆ ಮತ್ತು ಕೀಲು ಮರುಜೋಡಣಾ ತಜ್ಞ ವೈದ್ಯರು ಈಗ ದಾವಣಗೆರೆಯಲ್ಲಿ

ಡಾ. ಚೇತನ್ ಮಠದ್

ಕೀಲು ಮೂಳೆ ಮತ್ತು ಕೀಲು ಮರುಜೋಡಣಾ ತಜ್ಞ ವೈದ್ಯರು

ಲಕ್ಷಣಗಳು :
- ತೀವ್ರವಾದ ಮೊಣಕಾಲು ನೋವು ಮತ್ತು ಬಿಗಿತ
- ದೈನಂದಿನ ಚಟುವಟಿಕೆಯಲ್ಲಿ, ನಡೆದಾಡುವಾಗ ತೀವ್ರವಾದ ಮೊಣಕಾಲು ನೋವು
- ಮೆಟ್ಟಿಲು ಹತ್ತುವಾಗ, ಕುಳಿತುಕೊಳ್ಳುವಾಗ ಮೊಣಕಾಲಿನಲ್ಲಿ ವಿಪರೀತ ನೋವು

*ಷರತ್ತುಗಳು ಅನ್ವಯ




15ನೇ ಫೆಬ್ರವರಿ 2025 (3ನೇ ಶನಿವಾರ) | ಮಧ್ಯಾಹ್ನ 2:00 ರಿಂದ 5:00

ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಹಾಸ್ಪಿಟಲ್, 2ನೇ ಹಂತ, ಪಿಜಿ ಎಕ್ಸ್ಟೆಂಕ್ಷನ್, ದಾವಣಗೆರೆ

ಸಹ್ಯಾದ್ರಿ ನಾರಾಯಣ ಆಸ್ಪತ್ರೆ ಎನ್‌ಟಿ ರಸ್ತೆ, ಹರಕೆರೆ, ಶಿವಮೊಗ್ಗ | Take Care 8884431388, 08192 250118



manipalhospitals LIFE'S ON



ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರಿನ ಪ್ರಖ್ಯಾತ ವಾಸ್ಕ್ಯುಲರ್ ಶಸ್ತ್ರಚಿಕಿತ್ಸಾ ತಜ್ಞರು ಪ್ರತಿ ತಿಂಗಳ ಮೂರನೇ ಭಾನುವಾರದಂದು ಆರೈಕೆ ಆಸ್ಪತ್ರೆ, ದಾವಣಗೆರೆಯಲ್ಲಿ ಸಮಾಲೋಚನೆಗೆ ಲಭ್ಯವಿರುತ್ತಾರೆ

ಭಾನುವಾರ, 16ನೇ ಫೆಬ್ರುವರಿ, 2025

ಬೆಳಗ್ಗೆ 10:00 ಘಂಟೆಯಿಂದ ಮಧ್ಯಾಹ್ನ 1:00 ಘಂಟೆಯವರೆಗೆ

Aaraike Hospitals ಆರೈಕೆ ಆಸ್ಪತ್ರೆ

ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ

ಡಾ. ರಾಜೇಂದ್ರ ಪ್ರಸಾದ್ ಬಿ

ಎಂಬಿಬಿಎಸ್, ಎಂ.ಎಸ್, ಡಿಎನ್‌ಬಿ (ರಕ್ತನಾಳ ಶಸ್ತ್ರಚಿಕಿತ್ಸೆ), ಎಫ್‌ವಿಇಎಸ್ (ಆಸ್ಟ್ರಿಯಾ)

ಸಲಹೆಗಾರರು - ವಾಸ್ಕ್ಯುಲರ್ ಮತ್ತು ಎಂಡೋವಾಸ್ಕ್ಯುಲರ್ ಸರ್ಜರಿ

ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರು.

ಈ ಸಮಸ್ಯೆಗಳ ಕುರಿತು ತಜ್ಞರೊಂದಿಗೆ ಸಲಹೆ ಪಡೆಯಿರಿ

ಉಬ್ಬಿರುವ ರಕ್ತನಾಳಗಳು । ಕೈ ಮತ್ತು ಕಾಲುಗಳ ಊತ ಮತ್ತು ನೋವು । ಮಧುಮೇಹ ಕಾಲು । ಡಯಾಲಿಸಿಸ್ । ವಾಸಿಯಾಗದ ಗಾಯಗಳು । ಕಾಲು ಬೆರಳುಗಳ ಬಣ್ಣ ಬದಲಾವಣೆ । ಗ್ಯಾಂಗ್ರೀನ್ ಮತ್ತು ಇನ್ನೂ ಅನೇಕ ಸಮಸ್ಯೆಗಳು

Manipal Hospital Yeshwanthpur
Brigade Gateway, #26/4, 80 Feet, Dr. Rajkumar Road, Malleshwaram West, Bengaluru 560 055, Karnataka.
P 080 6165 6262

ನಿಮ್ಮ ಅಪಾಯಿಂಟ್ಮೆಂಟ್‌ಗಾಗಿ ಕರೆ ಮಾಡಿ!
Harishkumar
+91 80505 60580



We are HIRING!

Kan Biosys® THE MICROBIAL COMPANY

KARNATAKA

500000+ Farmers | 3000+ Partners | 30+Years Experience

**Regional Sales Manager (RSM)** — Post - 1, Experience 12 to 15 years
Educational Qualification - B.Sc / M.Sc / MBA Agri
Location - Tumkur, Kolar, Chilkaballapur, Bangalore, Ramanagara, Chitradurga

**Area Sales Manager (ASM)** — Posts - 2, Experience 10 to 12 years
Educational Qualification - B.Sc / M.Sc / MBA Agri
Location - Tumkur, Kolar, Chilkaballapur, Bangalore, Ramanagara, Chitradurga, Vijayapura, Bagalkot, Raichur, Bellary

**Territory Manager (TM)** — Posts - 10, Experience 4 to 7 years
Educational Qualification -B.Sc / M.Sc Agri
Location - Tumkur, Kolar, Chilkaballapur, Bangalore, Ramanagara, Chitradurga, Bidar, Gulbarga, Vijayapura, Bagalkot, Raichur, Bellary, Davangere, Belgavi, Dharwad, Haveri

If you think you are the best fit for the above profile, kindly send your resume to the below email id soon.

Contact - Maruti Hadiganal : 9483450842

KHETI KI JAAN ISO ECOCERT hr@kanbiosys.com



## ಜನ್ಮದಿನದ ಶುಭಾಶಯಗಳು



ಇಂದು ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ನಮ್ಮೆಲ್ಲರ ಆತ್ಮೀಯರೂ, ಸ್ನೇಹಜೀವಿಗಳೂ ಮತ್ತು ನಮ್ಮ ಸಂಘದ ಅಧ್ಯಕ್ಷರಾದ

**ಶ್ರೀ ಬುಲೆಟ್ ರುದ್ರೇಶ್**

ಅವರಿಗೆ ಹೃದಯಪೂರ್ವಕ ಶುಭಾಶಯಗಳು...

ಶುಭ ಕೋರುವವರು :

ಕಾವೇರಿ ಮಾತಾ ಪ್ಲಂಬರ್ ಕಾರ್ಮಿಕರ ಸಂಘದ ಎಲ್ಲಾ ಪದಾಧಿಕಾರಿಗಳು ದಾವಣಗೆರೆ.

ಸ್ಟೇಡಿಯಂ ಫ್ರೆಂಡ್ಸ್ ಗ್ರೂಪ್ಸ್ ದಾವಣಗೆರೆ

"ಪ್ಲಂಬರ್ಸ್ ದಿನಾಚರಣೆ" 13ನೇ ವಾರ್ಷಿಕೋತ್ಸವದ ಪ್ರಯುಕ್ತ

ದಿನಾಂಕ : 23.03.2025ನೇ ಭಾನುವಾರ ಬೆಳಿಗ್ಗೆ 10.30ಕ್ಕೆ, ಚನ್ನಗಿರಿ ವಿರುಪಾಕ್ಷಪ್ಪ ಕಲ್ಯಾಣ ಮಂಟಪ, ಗಡಿಯಾರ ಕಂಬದ ಹತ್ತಿರ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು ಎಲ್ಲಾ ಪ್ಲಂಬರ್‌ಗಳು ಕುಟುಂಬ ಸಮೇತ ಆಗಮಿಸಬೇಕಾಗಿ ವಿನಂತಿ.



## ಹೃದಯವಂತ ಗೆಳೆಯನಿಗೆ ಜನ್ಮದಿನದ ಶುಭಾಶಯಗಳು



HAPPY BIRTHDAY

ಸ್ನೇಹಿತರ ಪಾಲಿನ ಚಿರಂಜೀವಿ, ಹಸನ್ಮುಖಿ,
ಶಾಮನೂರಿನಲ್ಲಿ ಅಪಾರ ಸ್ನೇಹಿತರನ್ನು ಹೊಂದಿರುವ ಸ್ನೇಹಜೀವಿ,
ನಿಷ್ಕಲ್ಮಶ ಮುಗ್ಧ ಮಗು ಮನಸ್ಸಿನ ನಗುವಿನ ಗೆಳೆಯ
ನಮ್ಮೆಲ್ಲರ ಅತ್ಯಂತ ಪ್ರೀತಿಯ ಆತ್ಮೀಯ ಹೃದಯವಂತ ಗೆಳೆಯ

**ಶ್ರೀ ಶಾಮನೂರು ಪ್ರಶಾಂತ್**

ಅವರಿಗೆ ಜನ್ಮದಿನದ ಶುಭಾಶಯಗಳು.

ಶುಭ ಕೋರುವವರು :

ಶಾಮನೂರು ಪ್ರಶಾಂತ್ ಸ್ನೇಹಿತರ ಬಳಗ



SINCE 1955

KUMARAN SILK TRADERS

VARAM BOUTIQUE JEWELS 92.5 SILVER JEWELLERY

Saree for Every Occasion, Style & Culture.

Ph: 8867792923

ಚೆನ್ನೈ ಕುಮರನ್

EXHIBITION & SALE

ದಾವಣಗೆರೆ



— ವೇದಿಕೆ —

ಸ್ಥಳ : ಸದರ್ನ್ ಸ್ಟಾರ್ (ಪಾರ್ವತಿ ಪೆರ್ಲ್ಸ್)
ಶಾಮನೂರು ರಸ್ತೆ, ಕುವೆಂಪು ನಗರ
ದಾವಣಗೆರೆ 577004

— ದಿನಾಂಕ —
ಫೆಬ್ರವರಿ
14th FRI 15th SAT 16th SUN 2025
at 10 AM to 9 PM

SAREES 5% DISCOUNT

92.5 SILVER JEWELLERY 10% DISCOUNT

*Conditions Apply

ಹೊಸ ನಂ. 15, ಹಳೆಯ ನಂ. 653, 11ನೇ ಸಿ ಮುಖ್ಯರಸ್ತೆ, 5ನೇ ಬ್ಲಾಕ್, ಜಯ ನಗರ, ಬೆಂಗಳೂರು - 560 041. ಫೋನ್ : +91 88677 92923

# ಕೋಡಿಯಾಳ ಹೊಸಪೇಟೆಯಲ್ಲಿ ನಾಳೆ ತುಂಗಭದ್ರಾ ಆರತಿ



ಹರಿಹರ, ಫೆ. 13- ಕಳೆದ 5 ವರ್ಷಗಳಿಂದ ನಡೆಯುತ್ತಿದ್ದ ತುಂಗಾರತಿ ಕಾರ್ಯಕ್ರಮವನ್ನು, ಈ ವರ್ಷದಿಂದ ತುಂಗಭದ್ರಾ ಆರತಿ ಕಾರ್ಯಕ್ರಮವನ್ನಾಗಿ ಆಚರಿಸಲು ಸಕಲ ಸಿದ್ದತೆಗಳು ಪೂರ್ಣಗೊಂಡಿವೆ ಎಂದು ಕೋಡಿಯಾಲ ಹೊಸಪೇಟೆಯ ಪುಣ್ಯಕೋಟಿ ಮಠದ ಶ್ರೀ ಜಗದೀಶ್ವರ ಸ್ವಾಮೀಜಿ ತಿಳಿಸಿದರು.

ಇಲ್ಲಿಗೆ ಸಮೀಪದ ಕೋಡಿಯಾಲ ಹೊಸಪೇಟೆ (ಕುಮಾರಪಟ್ಟಣ) ಗ್ರಾಮದ ಪುಣ್ಯಕೋಟಿ ಮಠದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರಚಾರ ಪರಿಕರಗಳನ್ನು ಬಿಡುಗಡೆಗೊಳಿಸಿ ಶ್ರೀಗಳು ಮಾತನಾಡಿದರು.

ತುಂಗಾರತಿ ಕಾರ್ಯಕ್ರಮವನ್ನು ಈ ವರ್ಷದಿಂದ ನಾಡಿದ್ದು ದಿನಾಂಕ 15 ರಂದು ಸಂಜೆ 5 ಗಂಟೆಗೆ ಮಠದ ಹತ್ತಿರದ ತುಂಗಭದ್ರಾ ನದಿಯ ದಡದಲ್ಲಿ ನದಿಗೆ ಆರತಿ ಕಾರ್ಯಕ್ರಮವು ಬಹು ವಿಜೃಂಭಣೆಯಿಂದ ನಡೆಯಲಿದೆ ಎಂದು ಶ್ರೀಗಳು ಹೇಳಿದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ವಹಿಸುವರು. ಸವಣೂರು ದೊಡ್ಡಹುಣಸೇ ಕಲ್ಮಠದ ಶ್ರೀ ಚನ್ನಬಸವ ಸ್ವಾಮಿಗಳು, ಕಡೆನಂದಿಹಳ್ಳಿ ರೇವಣಸಿದ್ದೇಶ್ವರ ಪುಣ್ಯಾಶ್ರಮದ ಶ್ರೀ ರೇವಣಸಿದ್ದ ಸ್ವಾಮಿಗಳು, ಅಕ್ಕಿಆಲೂರು ಮುತ್ತಿನಕಂತಿಮಠದ ಶ್ರೀ ಚಂದ್ರಶೇಖರ ಸ್ವಾಮಿಗಳು, ನಾಗವಂದ ಧರ್ಮಕ್ಷೇತ್ರದ ಶ್ರೀ ಶಿವಯೋಗಿ ಶಿವಾನಂದ ಸ್ವಾಮಿಗಳು, ವಿಜಯಪುರ ಸಿದ್ದಲಿಂಗೇಶ್ವರ ಮಠದ ಸಿದ್ದಲಿಂಗ ಸ್ವಾಮಿಗಳು ಭಾಗವಹಿಸುವರು.

ಹಾವೇರಿ ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ಅವರಿಗೆ ವಿಶ್ವಮಾತೆ ಪುಣ್ಯಕೋಟಿ ಪ್ರಶಸ್ತಿ ಹಾಗೂ ಮೈಸೂರು ಕರ್ನಾಟಕ ಮುಕ್ತ ವಿಶ್ವ ವಿದ್ಯಾಲಯದ ಕುಲಪತಿ ಡಾ. ಶರಣಬಸಪ್ಪ ವಿ.ಹಲಸೆ ಅವರಿಗೆ ಆಚಾರ್ಯ ವ ಮಹಾಚಾರ್ಯ ಸೇವಾ ವಿಭೂಷಣ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು.

ಶಾಸಕ ಪ್ರಕಾಶ ಕೋಳಿವಾಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಮಾಜಿ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ, ಡಾ.ಪ್ರಭಾ ಮಲ್ಲಿಕಾರ್ಜುನ್, ರಾಜ್ಯ ಜವಳಿ, ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ, ಐಜಿಪಿ ಡಾ. ಬಿ.ಆರ್. ರವಿಕಾಂತೇಗೌಡ, ಹಾವೇರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ, ಗ್ರಾಸಿಂ ಕಾರ್ಖಾನೆಯ ಅಧ್ಯಕ್ಷ ಸೌಮ್ಯಕಾಂತ್ ಮೊಹಂತಿ, ಹೈಕೋರ್ಟ್ ಹಿರಿಯ ನ್ಯಾಯವಾದಿ ಶಂಕರ ಹೆಗಡೆ, ತಪೋವನದ ಶಶಿಕುಮಾರ ಮೆಹರವಾಡೆ, ಪ್ರಥಮ ದರ್ಜೆ ಗುತ್ತಿಗೆದಾರ ಶಂಕರ ಗಡ್ಡದ, ಕೋಡಿಯಾಲ ಹೊಸಪೇಟೆ ಗ್ರಾಮದ ನೀಲಮ್ಮ ಸಣ್ಣಹನುಮಂತಗೌಡ ಪಾಟೀಲ, ಮಾಜಿ ಸಚಿವ ಎಂ.ಪಿ ರೇಣುಕಾಚಾರ್ಯ, ಶಾಸಕ ಬಸವ ರಾಜ ಶಿವಣ್ಣನವರ, ಮಾಜಿ ಸಂಸದ ಜಿ.ಎಂ ಸಿದ್ದೇಶ್ವರ, ಶಾಸಕ ಬಿ.ಪಿ ಹರೀಶ್, ಮಾಜಿ ಶಾಸಕ ಅಜ್ಜಂಪೀರ್ ಖಾದ್ರಿ, ಮಾಜಿ ಸಚಿವ ಆರ್ ಶಂಕರ್, ಗಡಿನಾಡು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸೋಮಣ್ಣ ಬೇವಿನಮರದ, ಮಾಜಿ ಶಾಸಕರಾದ ಎಸ್.ರಾಮಪ್ಪ, ಅರುಣ ಕುಮಾರ ಪೂಜಾರ, ವಿರುಪಾಕ್ಷಪ್ಪ ಬಳ್ಳಾರಿ, ಎಚ್.ಎಸ್ ಶಿವಶಂಕರ್ ಆಗಮಿಸುವರು.

ಈ ಸಂದರ್ಭದಲ್ಲಿ ರಾಣೇಬೆನ್ನೂರು ತಾಲ್ಲೂಕು ಪಂಚಾಯತ್ ಮಾಜಿ ಅಧ್ಯಕ್ಷ ರವೀಂದ್ರಗೌಡ ಎಫ್ ಪಾಟೀಲ, ಕೋಡಿಯಾಲ ಗ್ರಾಮ ಪಂಚಾಯತಿ ಮಾಜಿ ಸದಸ್ಯ ಕರಿಯಪ್ಪ ಮಾಳಗಿ, ಕೃಷ್ಣೋಜಿ ರಾವ್, ಕುಮಾರ್ ಸ್ವಾಮಿ ಹಿರೇಮಠ್ ಇತರರು ಹಾಜರಿದ್ದರು.

# ದಾವಣಗೆರೆಗೆ ರಂಗ ಸಂವೇದನೆಯ ನೆಲೆಗಟ್ಟಿದೆ



ದಾವಣಗೆರೆ, ಫೆ. 13 - ದಾವಣಗೆರೆ ನೆಲ ಸಂಸ್ಕೃತಿಯಲ್ಲಿ ಸುಮಾರು 128 ನಾಟಕ ಕಂಪನಿಗಳು ತಮ್ಮ ರಂಗಪ್ರಯೋಗವನ್ನು ಮಾಡಿವೆ. ಇಂದಿನ ಯುವ ಜನತೆ ರಂಗಭೂಮಿಯಲ್ಲಿ ವಿಶೇಷ ಆಸಕ್ತಿ ಹೊಂದಿದ್ದಾರೆ. ಆದರೆ ತಮ್ಮನ್ನು ತಾವು ಬಳಸಿಕೊಳ್ಳಲು ವಿಫಲವಾಗುತ್ತಿದ್ದಾರೆ ಎಂದು ವೃತ್ತಿ ರಂಗಭೂಮಿ ರಂಗಾಯಣದ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ ಹೇಳಿದರು.

ಕೊಂಡಜ್ಜಿಯ ಸ್ಕೌಟ್ ಕ್ಯಾಂಪ್‌ನಲ್ಲಿ ವೃತ್ತಿ ರಂಗಭೂಮಿ ರಂಗಾಯಣ (ದಾವಣಗೆರೆ), ಕರ್ನಾಟಕ ನಾಟಕ ಅಕಾಡೆಮಿ (ಬೆಂಗಳೂರು) ಇವರ ಸಹಯೋಗದೊಂದಿಗೆ ಏರ್ಪಡಿಸಿದ್ದ ವೃತ್ತಿ ರಂಗನಾಟಕ ರಚನಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯಾವುದೇ ಶಿಬಿರಗಳು ಶಿಬಿರಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತವೆ ವಿನಃ ಕೈ ಹಿಡಿದು ನಡೆಸುವುದಿಲ್ಲ. ಶಿಬಿರಗಳು ತೋರಿಸಿದ ಮಾರ್ಗದಲ್ಲಿ ಶಿಬಿರಾರ್ಥಿಗಳು ಮುನ್ನಡೆದು ಯಶಸ್ಸನ್ನು ಕಾಣಬೇಕು ಎಂದು ಕಡಕೋಳ ಆಶಯ ವ್ಯಕ್ತಪಡಿಸಿದರು.

ಶಿಬಿರದ ಸಂಪನ್ಮೂಲ ವ್ಯಕ್ತಿ ನಟರಾಜ್ ಹೊನ್ನವಳ್ಳಿ ಮಾತನಾಡಿ, ಶಿಬಿರಗಳಲ್ಲಿ vision format ವಿಷನ್ ಫಾರ್ಮಾಟ್ ಜಾಸ್ತಿ ಆಗಬೇಕು. ಇಂದಿನ ದಿನಮಾನಗಳಲ್ಲಿ ಒಬ್ಬ ನಾಟಕ ರಚನೆಕಾರರನ್ನು ಸೃಷ್ಟಿ ಮಾಡುವುದು ಬಹಳ ಕಷ್ಟ. ಆದರೆ, ಇಂಥ ಶಿಬಿರಗಳು ಬರಹಗಾರರೊಂದಿಗೆ ಸಂವಾದ ನಡೆಸಿ ಸೂಕ್ಷ್ಮತೆಯ ದಿಕ್ಕನ್ನು ತೋರಿಸುತ್ತವೆ ಎಂದು ಹೇಳಿದರು.

## ವೃತ್ತಿ ರಂಗನಾಟಕ ರಚನಾ ಶಿಬಿರದಲ್ಲಿ ಮಲ್ಲಿಕಾರ್ಜುನ ಕಡಕೋಳ

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಹಿರಿಯ ರಂಗಭೂಮಿ ಕಲಾವಿದ ಬಾ.ಮ. ಬಸವರಾಜಯ್ಯ ಮಾತನಾಡಿ, ಮೊದಲಿನಿಂದಲೂ ಕೊಂಡಜ್ಜಿಗೂ ಹಾಗು ರಂಗಭೂಮಿಗೂ ವಿಶೇಷವಾದ ನಂಟಿದೆ. ಯಾವುದೇ ನಾಟಕವನ್ನು ರಚಿಸುವಾಗ ವಾಸ್ತವ, ವರ್ತಮಾನದೊಂದಿಗೆ ನೈಜ ಆಲೋಚನೆಗಳನ್ನು ಅಳವಡಿಸಿಕೊಂಡು ಉತ್ತಮ ನಾಟಕವನ್ನು ರಚಿಸಬೇಕೆಂದು ಕರೆಕೊಟ್ಟರು.

ಶಿಬಿರದ ನಿರ್ದೇಶಕ ಬಸವರಾಜ ಪಂಚಗಲ್ ಮಾತನಾಡಿದರು. ಶಿಬಿರದ ನಿರ್ದೇಶಕ ಬಸವರಾಜ ಪಂಚಗಲ್, ವೃತ್ತಿ ರಂಗಭೂಮಿಯ ವಿಶೇಷ ಅಧಿಕಾರಿಗಳಾದ ರವಿಚಂದ್ರ, ಗಣೇಶ್ ಅಮೀನಗಡ ಉಪಸ್ಥಿತರಿದ್ದರು. ವೀಣಾ. ಪಿ ನಿರೂಪಿಸಿದರು.

## ವೀರಶೈವ ಸಭಾದ ಪದಾಧಿಕಾರಿಗಳಿಗೆ ಗೌರವ



ದಾವಣಗೆರೆ, ಫೆ.13- ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ಗೌರವಾಧ್ಯಕ್ಷ ಎಸ್.ಜಿ. ಉಳುವಯ್ಯ ಅವರ ನಿವಾಸದಲ್ಲಿ ಇಂದು ನಡೆದ ಶ್ರೀ ಉಳವಿ ಚೆನ್ನಬಸವೇಶ್ವರ ರಥೋತ್ಸವ ಪೂಜಾ ಕಾರ್ಯಕ್ರಮದ ಸಂದರ್ಭದಲ್ಲಿ ಮಹಾಸಭಾದ ಪದಾಧಿಕಾರಿಗಳನ್ನು ಗೌರವಿಸಲಾಯಿತು. ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಅಣಬೇರು ರಾಜಣ್ಣ, ಜಿಲ್ಲಾಧ್ಯಕ್ಷ ಐಗೂರು ಸಿ. ಚಂದ್ರಶೇಖರ್, ಪದಾಧಿಕಾರಿಗಳಾದ ನಿರ್ಮಲಾ ಸುಭಾಷ್, ಯಶೋಧ ಪ್ರಕಾಶ್, ಮಂಜುಳಾ ಈಶ್ವರಪ್ಪ, ದ್ರಾಕ್ಷಾಯಣಮ್ಮ, ಶಿವಕುಮಾರ್ ಕೊರಟಗೆರೆ, ಅವಿನಾಶ್ ಬಸವರಾಜ್, ಪ್ರಶಾಂತ್, ಮಾಗಾನಹಳ್ಳಿ ಗಿರೀಶ್, ಸಿದ್ದಲಿಂಗ ಸ್ವಾಮಿ, ಶಿವಕುಮಾರ್, ನಿಧಿ ಐನಳ್ಳಿ, ನವೀನ ಕಾಯಿ, ಶಂಭು ಉರೇಕೊಂಡಿ, ಮುಖಂಡರಾದ ಪ್ರೊ. ವೈ. ವೃಷಭೇಂದ್ರಪ್ಪ, ಎನ್.ಜಿ ಪುಟ್ಟಸ್ವಾಮಿ, ಹಿರೇಮಠ್ ಮುಂತಾದವರು ಉಪಸ್ಥಿತರಿದ್ದರು.

## ಹರಿಹರದಲ್ಲಿ ಇಂದು ದೂಡಾ ಜನ ಸಂಪರ್ಕ ಸಭೆ

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ ಹರಿಹರ ನಗರಸಭೆ ಆವರಣದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಜನ ಸಂಪರ್ಕ ಸಭೆಯನ್ನು ಏರ್ಪಡಿಸಲಾಗಿದೆ ಎಂದು ದೂಡಾ ಆಯುಕ್ತ ಹುಲ್ಮನೆ ತಿಮ್ಮಣ್ಣ ತಿಳಿಸಿದರು.

# ಹುಬ್ಬಳ್ಳಿ ಚೌಡಪ್ಪ ಗಲ್ಲಿಯಲ್ಲಿ ವಿಜೃಂಭಣೆಯ ಗುಗ್ಗಳ



ದಾವಣಗೆರೆ, ಫೆ. 13 - ಧಾರ್ಮಿಕ ಆಚರಣೆಗಳು ಕುಸಿಯುತ್ತಿರುವ ಇಂದಿನ ದಿನಗಳಲ್ಲಿ ಧರ್ಮ, ಆಚಾರ, ವಿಚಾರ ಮತ್ತು ಸಂಸ್ಕಾರಗಳೊಂದಿಗೆ ಸತತವಾಗಿ 25 ವರ್ಷಗಳ ಕಾಲ ಧಾರ್ಮಿಕ ಕಾರ್ಯಕ್ರಮ ಆಚರಿಸಿಕೊಂಡು ಬರುವ ಮೂಲಕ ಇಂದಿನ ಪೀಳಿಗೆಗೆ ಅರಿವು ಮೂಡಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ನುಡಿದರು.

ನಗರದ ಹುಬ್ಬಳ್ಳಿ ಚೌಡಪ್ಪ ಗಲ್ಲಿಯಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಬುಧವಾರ ಭರತ ಹುಣ್ಣಿಮೆಯಂದು ಶ್ರೀ ವೀರಭದ್ರೇಶ್ವರ ಶಿಲಾಮೂರ್ತಿ 25ನೇ ವಾರ್ಷಿಕ ಮಹೋತ್ಸವ, ಬಲಮುರಿ ಶ್ರೀ ಗಣೇಶ ಶಿಲಾಮೂರ್ತಿ 7ನೇ ವಾರ್ಷಿಕ ಮಹೋತ್ಸವ ಹಾಗೂ ಉಪಾಸಕರಾದ ಲಿಂ. ಗುರುಬಾಯಮ್ಮನವರ 10ನೇ ವರ್ಷದ ಪುಣ್ಯಸ್ಮರಣೋತ್ಸವದ ಧಾರ್ಮಿಕ ಸಮಾರಂಭದ ಅಂಗವಾಗಿ ಆಯೋಜಿಸಿದ್ದ ಗುಗ್ಗಳ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಗುರುಬಾಯಮ್ಮನವರು ಕಳೆದ 25 ವರ್ಷಗಳ ಹಿಂದೆ ತಮ್ಮ ಮನೆಯಲ್ಲಿ ಒಡಮೂಡಿದ ಶ್ರೀ ವೀರಭದ್ರೇಶ್ವರ ಸ್ವಾಮಿ ಶಿಲಾಮೂರ್ತಿಯನ್ನು ಪ್ರತಿಷ್ಠಾಪಿಸಿ ಅಂದಿನಿಂದ 10 ವರ್ಷಗಳ ಕಾಲ ಪ್ರತಿ ಭರತ ಹುಣ್ಣಿಮೆಯಂದೇ ಗದ್ದುಗೆ ಪ್ರತಿಷ್ಠಾಪಿಸಿ, ಗುಗ್ಗಳ ಕಾರ್ಯಕ್ರಮ ನಡೆಸಿಕೊಂಡು ಬಂದಿದ್ದಾರೆ. ಅವರ ಕಾಲಾ ನಂತರ ಪುತ್ರ ಕರಿಬಸಪ್ಪ ಮತ್ತು ಜಯಮ್ಮ ದಂಪತಿ, ತಾಯಿ ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಇಂದಿನವರೆಗೂ ಧಾರ್ಮಿಕ ಪದ್ಧತಿ ಮುಂದುವರೆಸಿಕೊಂಡು ಬಂದಿದ್ದಾರೆ ಎಂದರು.

ಭರತ ಹುಣ್ಣಿಮೆಯಂದೇ ಗುಗ್ಗಳ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿರುವುದಕ್ಕೆ ಒಂದು ಹಿನ್ನೆಲೆ ಇದೆ. ಗಣಾಚಾರಿಗಳ ಅಧಿನಾಯಕ ಶ್ರೀ ವೀರಭದ್ರೇಶ್ವರ ಸ್ವಾಮಿ ಆಗಿದ್ದು, ಧರ್ಮಕ್ಕೆ ಕುತ್ತು ಬಂದಾಗ ಅದನ್ನು ಸಹಿಸದೇ ನಿಂದನೆ ಮಾಡುವವರಿಗೆ ಶಿಕ್ಷೆ ನೀಡುವವನೇ ಶ್ರೀ ವೀರಭದ್ರಶ್ವೇರ ಸ್ವಾಮಿ ಆಗಿದ್ದಾನೆ. ಈತನ ಆರಾಧನೆ ಮೂಲಕ ದೇವಾನು ದೇವತೆಗಳ ರಥೋತ್ಸವಗಳು ನಡೆಯುತ್ತವೆ ಎಂದು ಮಾಹಿತಿ ನೀಡಿದರು.

ದೂಡಾ ಸದಸ್ಯೆ ವಾಣಿ ಎಂ.ಜಿ. ಬಕ್ಕೇಶ್ ಮಾತನಾಡಿ, ಇಂತಹ ಧಾರ್ಮಿಕ ಕಾರ್ಯಕ್ರಮಗಳಿಂದ ಜನರ ಭಾವನೆಗಳಲ್ಲಿ ಭಯ, ಭಕ್ತಿ ಮೂಡುತ್ತವೆ. ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯುವಂತಾಗಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಅಭಿ ಕಾಟನ್ ಮಾಲೀಕ ಎಂ.ಜಿ.ಬಕ್ಕೇಶ್, ಕೊಟ್ರೇಶ್, ವೀರಪ್ಪ ಬಿಜ್ಜೂರು, ಮಹಾಂತೇಶ್ ಕಾರಟಗಿ, ಶ್ರೀಮತಿ ಲಕ್ಷ್ಮಿ ರವಿ ಬಿಜ್ಜೂರು ಗುರುಲಿಂಗಯ್ಯ ಹಿರೇಮಠ್, ಮುರುಗೇಶ್, ಶಿವನಗೌಡ, ಸವಿತಾ ಸಂತೋಷ್ ಸೇರಿದಂತೆ ಭಕ್ತರು ಪಾಲ್ಗೊಂಡಿದ್ದರು. ದಾವಣಗೆರೆ ಟೈಮ್ಸ್ ಸಂಪಾದಕ ಜೆ.ಎಸ್. ವೀರೇಶ್ ಕಾರ್ಯಕ್ರಮ ನಿರೂಪಿಸಿದರು.

## ಲತಾರಾಣಿಗೆ ಪಿಹೆಚ್‌ಡಿ



ದಾವಣಗೆರೆ, ಫೆ. 13- ನಗರದ ಜೈನ್ ತಾಂತ್ರಿಕ ಮಹಾವಿದ್ಯಾಲಯದ ಗಣಕ ಯಂತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಲತಾರಾಣಿ ಟಿ.ಆರ್. ಅವರಿಗೆ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು 24ನೇ ಘಟಿಕೋತ್ಸವದಲ್ಲಿ ಪಿಹೆಚ್‌ಡಿ ಪದವಿ ನೀಡಿದೆ.

ಲತಾರಾಣಿ, ನಗರ ಜೆಐಟಿ ಗಣಕಯಂತ್ರ ವಿಭಾಗದ ಮುಖ್ಯಸ್ಥ ಡಾ. ಮೌನೇಶಚಾರಿ ಎಸ್. ಅವರ ಮಾರ್ಗದರ್ಶನದಲ್ಲಿ ಮಂಡಿಸಿದ 'ಎನ್ ಇಂಟೆಲಿಜೆಂಟ್ ಫ್ರೇಮ್‌ವರ್ಕ್ ಫಾರ್ ಇಂಟ್ರೂಜನ್ ಡಿಟೆಕ್ಷನ್ ಇನ್ ವೈರ್‌ಲೆಸ್ ಸೆನ್ಸಾರ್ ನೆಟ್‌ವರ್ಕ್ಸ್' ವಿಷಯದ ಮೇಲಿನ ಪ್ರೌಢ ಪ್ರಬಂಧಕ್ಕೆ ಈ ಪದವಿ ಲಭಿಸಿದೆ.

## ಯುವನಿಧಿಗೆ ಅರ್ಜಿ

ದಾವಣಗೆರೆ, ಫೆ. 13 - ಗ್ಯಾರಂಟಿ ಯೋಜನೆಯಾದ ಯುವನಿಧಿ ಯೋಜನೆಯಡಿಯಲ್ಲಿ ನಿರುದ್ಯೋಗಿ ಭತ್ಯೆ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ನಾಳೆ ಕೊನೆ ದಿನ. ಗ್ರಾಮಒನ್, ಕರ್ನಾಟಕ ಒನ್, ದಾವಣಗೆರೆ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲೂ ನೋಂದಣಿ ಮಾಡಿಕೊಳ್ಳಬಹುದು ಎಂದು ಉದ್ಯೋಗಾಧಿಕಾರಿ ರವೀಂದ್ರ ತಿಳಿಸಿದ್ದಾರೆ.

## ಪ್ರೇಮ ಭಾವ

**ಇಂದು ಪ್ರೇಮಿಗಳ ದಿನಾಚರಣೆ**

ಇಬ್ಬನಿಯು ಜಾರುತಿದೆ ಅವಳ ಕಣ್ಣ ಸಲುಗೆಗೆ
ವಿರಹವು ವಿನೋದವು ಎಲೆಯ ನೋವಿಗೆ.!
ಹಿಂದೆ ಯಾವ ಜನ್ಮದ ಮೈತ್ರಿ.?
ಯಾರು ಬಲ್ಲರು ಯಾವುದು ಖಾತ್ರಿ.?

ಮಬ್ಬು ಕಳೆದು
ಬೆಳಕು ಹರಿದು
ಭಾವ ಸುರಿದು
ಒಲವು ಪೊರೆದು
ನಗುವ ಮಧುರ
ನೋವಿನೊಲವು.!
ತಾಗಿ ರವಿಯ ಕಿರಣದ ಬಲವು

ಬಿರಿವ ಬಿಡಿ ಹೂವಿನ ಮೌನ
ಪ್ರೇಮದ ಪರಿ ಪಸರಿ ಧ್ಯಾನ
ಎಲ್ಲೋ ದುಂಬಿಯ ನಾದ
ಉಕ್ಕಿ ಹರಿದ ಪ್ರೇಮ ಉನ್ಮಾದ.!

ಎಲ್ಲೋ ಸಾಗರದಲೆಯು ತಾಕಿ
ಪ್ರೇಮ ಸ್ಪರ್ಶವು ಸೋಕಿ.!
ನಾಚಿ ನಿಂತಿದೆ ದಡವು
ನಗುವ ಚಲ್ಲುತ ಅರಳಿ ಸುಮವು

ಅವಳ ಕಣ್ಣೋಟದ ಸೆಳವು
ಸೆರೆ ಸಿಕ್ಕಿದೆ ದೀನ ಹೃದಯವು.!!
ಇನ್ನೆಲ್ಲಿ ಭಾವಗಳ ಅಳಿವು
ಮತ್ತೆ ಜಾರುತಿದೆ ಇಬ್ಬನಿಯ ಹನಿಯು


-ಬಸವರಾಜ ಕರುವಿನ, ಬಸವನಾಳು


## ಹರಿಹರದಲ್ಲಿ ಗ್ರಾಮದೇವತೆ ಉತ್ಸವ ಇಂದು ಹಂದರಕಂಬ ಪೂಜೆ



ಬರುವ ಮಾರ್ಚ್ 18 ರಿಂದ 22 ರವರೆಗೆ ನಡೆಯುವ ಗ್ರಾಮ ದೇವತೆ ಉತ್ಸವದ ಅಂಗವಾಗಿ ಇಂದು ಬೆಳಿಗ್ಗೆ 10 ಕ್ಕೆ ಸಹಸ್ರಾರ್ಜುನ ವೃತ್ತದ ಹತ್ತಿರ ಹಂದರ ಕಂಬ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಉತ್ಸವ ಸಮಿತಿಯ ಅಧ್ಯಕ್ಷ ಹಾರ್ನಳ್ಳಿ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಗಿರೀಶ್ ಗೌಡ, ಖಜಾಂಚಿ ಕೆಂಚಪ್ಪ ದೊಡ್ಡಮನೆ, ಸಹ ಕಾರ್ಯದರ್ಶಿ ಸಿದ್ದಪ್ಪ ತಿಳಿಸಿದ್ದಾರೆ.

## ರಾಣೇಬೆನ್ನೂರು ರೇಣುಕಾ ಸೊಸೈಟಿ ಅಧ್ಯಕ್ಷ - ಉಪಾಧ್ಯಕ್ಷರ ಆಯ್ಕೆ





ರಾಣೇಬೆನ್ನೂರು, ಫೆ.13- ಇಲ್ಲಿನ ರೇಣುಕಾ ಅರ್ಬನ್ ಕೋ ಆಪ್ ಕ್ರೆಡಿಟ್ ಸೊಸೈಟಿ ಅಧ್ಯಕ್ಷರಾಗಿ ಬಿ.ಎಸ್. ಪಟ್ಟಣಶೆಟ್ಟಿ ಹಾಗೂ ಉಪಾಧ್ಯಕ್ಷರಾಗಿ ಬಿ.ಎಸ್. ಸಣ್ಣಗೌಡ್ರ ಇಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಅಣ್ಣ ಅವಿರೋಧವಾಗಿ ಆಯ್ಕೆಯಾದರು.

2025 ರಿಂದ 2030 ರವರೆಗೆ ಪಾಂಡುರಂಗ ತಾಂಬೆ, ಲಾಲಸಾಬ ನೀಲಗಾರ, ಆನಂದ ಕಡೇಮನಿ, ತುಳಜಪ್ಪ ಲದ್ವಾ, ಕಸ್ತೂರಮ್ಮ ಪಾಟೀಲ, ವಜ್ರೇಶ್ವರಿ ಲದ್ವಾ, ಹನುಮಂತ ನಾಯ್ಕ, ಈರಪ್ಪ ಮಾಂತಾ, ಜಗದೀಶ ಜಂಬಗಿ, ಬದರಿನಾಥ ಪಟ್ಟಣಶೆಟ್ಟಿ, ರೂಪಾಬಾಯಿ ಪವಾರ ಅವಿರೋಧವಾಗಿ ಆಯ್ಕೆಯಾದ ಆಡಳಿತ ಮಂಡಳಿ ಸದಸ್ಯರು.

# ಹರಿಹರದಲ್ಲಿ ನಂದಿ ರಥಯಾತ್ರೆಗೆ ಸ್ವಾಗತ



ಹರಿಹರ, ಫೆ.13- ಬ್ರಹ್ಮಗಿರಿ, ಗೋವಿನತೋಟ, ಪುದು, ಬಂಟ್ವಾಳ ತಾಲ್ಲೂಕಿನ ಗೋ ಸೇವಾ ಗತಿವಿಧಿ ಕರ್ನಾಟಕ, ರಾಧಸುರಭಿ, ಗೋಮಂದಿರ, ರಾಷ್ಟ್ರೀಯ ಗೋಸೇವಾ ಸಂಸ್ಥೆ ಟ್ರಸ್ಟ್ ವತಿಯಿಂದ ರಾಜ್ಯದಾದ್ಯಂತ ಡಿಸೆಂಬರ್ 31 ರಿಂದ ಮಾರ್ಚ್ 29 ರವರೆಗೆ ಸಂಚರಿಸುತ್ತಿರುವ ನಂದಿ ರಥಯಾತ್ರೆಯು ಇಂದು ಸಂಜೆ ನಗರಕ್ಕೆ ಆಗಮಿಸುತ್ತಿದ್ದಂತೆ, ಶಾಸಕ ಬಿ.ಪಿ. ಹರೀಶ್ ಮತ್ತು ಮಾಜಿ ಜಿಲ್ಲಾ ಪಂಚಾಯತಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಅವರು ನಂದಿ ವಿಗ್ರಹಗಳಿಗೆ ಹೂವಿನ ಹಾರ ಹಾಕುವ ಮೂಲಕ ಸ್ವಾಗತಿಸಿದರು.

ನಂದಿ ರಥೋತ್ಸವದ ಮೆರವಣಿಗೆ ನಗರದ ನೀರಾವರಿ ಇಲಾಖೆಯ ಶ್ರೀ ಗಣಪತಿ ದೇವಸ್ಥಾನದ ಆವರಣದಿಂದ ಆರಂಭಗೊಂಡು ಶಿವಮೊಗ್ಗ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಮುಖ್ಯರಸ್ತೆ, ಗಾಂಧಿ ವೃತ್ತ, ಹಳೆ ಪಿ.ಬಿ. ರಸ್ತೆಯ ಮೂಲಕ ಹಾದು ತುಂಗಭದ್ರಾ ನದಿ ತಟದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಆವರಣದಲ್ಲಿ ಅಂತ್ಯಗೊಂಡಿತು.

ಮೆರವಣಿಗೆಯಲ್ಲಿ ಶ್ರೀ ಹರಿಹರೇಶ್ವರ ಮಹಿಳಾ ಡೊಳ್ಳಿನ ಸಂಘ ಮತ್ತು ಇತರೆ ಕಲಾ ಮೇಳಗಳು ಭಾಗವಹಿಸಿ, ಮೆರವಣಿಗೆಗೆ ಮೆರಗು ನೀಡಿದವು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಮಾಜಿ ಜಿಪಂ ಸದಸ್ಯ ವೀರಭದ್ರಪ್ಪ, ಬಾತಿ ಚಂದ್ರಶೇಖರ್, ಧರಣೇಂದ್ರ, ಆದಿತ್ಯ, ರಾಜು ರೋಖಡೆ, ವಿನಾಯಕ ಆರಾಧ್ಯಮಠ, ರವಿ ರಾಯ್ಕರ್, ಶಶಿಧರ್, ಸಾಕ್ಷಿ ಶಿಂಧೆ, ರೂಪ ಶಶಿಕಾಂತ್, ಸುಮನ್ ಖಮಿತ್ಕರ್, ನಿರಂಜನ, ಸಂತೋಷ ಗುಡಿಮನಿ ಇತರರು ಹಾಜರಿದ್ದರು.

## ನಗರಕ್ಕೆ ಇಂದು ನಂದಿ ರಥಯಾತ್ರೆ

ಬ್ರಹ್ಮಗಿರಿ, ಗೋವಿನತೋಟ, ಪುದು, ಬಂಟ್ವಾಳ ತಾಲ್ಲೂಕಿನ ಗೋ ಸೇವಾ ಗತಿವಿಧಿ ಕರ್ನಾಟಕ, ರಾಧಸುರಭಿ, ಗೋಮಂದಿರ, ರಾಷ್ಟ್ರೀಯ ಗೋಸೇವಾ ಸಂಸ್ಥೆ ಟ್ರಸ್ಟ್ ವತಿಯಿಂದ ರಾಜ್ಯದಾದ್ಯಂತ ಸಂಚರಿಸುತ್ತಿರುವ ನಂದಿ ರಥಯಾತ್ರೆ ಇಂದು ನಗರಕ್ಕೆ ಆಗಮಿಸಲಿದೆ.

ಇಂದು ಬೆಳಿಗ್ಗೆ 9ಕ್ಕೆ ಹರಿಹರದಿಂದ ದೊಡ್ಡಬಾತಿಗೆ ತಲುಪಿ, ಶಾಮನೂರು, ನಾಗನೂರು, ಶಿರಮಗೊಂಡನಹಳ್ಳಿ ಮಾರ್ಗವಾಗಿ ದಾವಣಗೆರೆಯನ್ನು ಸಂಜೆ 4ಕ್ಕೆ ತಲುಪುತ್ತದೆ. ವಿದ್ಯಾರ್ಥಿ ಭವನದಿಂದ ಅಂಬೇಡ್ಕರ್ ವೃತ್ತ, ಜಯದೇವ ವೃತ್ತ, ಪ್ರವಾಸಿ ಮಂದಿರದ ರಸ್ತೆ ಮುಖಾಂತರವಾಗಿ ನಂದಿ ರಥವನ್ನು ಪೂರ್ಣ ಕುಂಭ, ವಾದ್ಯಗಳೊಂದಿಗೆ ಪಿ.ಜೆ. ಬಡಾವಣೆಯ ಶ್ರೀ ರಾಮ ಮಂದಿರಕ್ಕೆ ಆಗಮಿಸಲಿದೆ.

108 ಜೋಡೆತ್ತಿನ ಬಂಡಿಗಳ ಮೂಲಕ ಶೋಭಾಯಾತ್ರೆ, ನಂದಿ ಪೂಜೆ, ಸಮೂಹಿಕ ವಿಷ್ಣು ಸಹಸ್ರನಾಮ ಪಠಣ, ವಿವಿದ ಗವ್ಯ ಉತ್ಪನ್ನಗಳ ಮಾರಾಟ ನಡೆಯಲಿದೆ.

## ಶ್ರೇಷ್ಠ ಧರ್ಮ ವೀರಶೈವ ಧರ್ಮ

(3ನೇ ಪುಟದಿಂದ) ನಿರ್ದೇಶಕ ಪಿ.ಬಿ.ಗೌಡ, ಎಣ್ಣೆ ಬೀಜ ಬೆಳೆಗಾರರ ಸಂಘದ ನಿರ್ದೇಶಕ ನಂದಿಬೇವೂರು ಶೇಖರಗೌಡ ಪಾಟೀಲ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮುಖಂಡರಾದ ಎಚ್.ಎಂ.ಕೊಟ್ರಯ್ಯ, ಪಾಟೀಲ್ ಬೆಟ್ಟನಗೌಡ, ಟಿಎಚ್‌ಎಂ ಮಲ್ಲಿಕಾರ್ಜುನ, ಮಟ್ಟಿ ಮಂಜುನಾಥ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಷಬಾನ್ ಖುಷಿಯಲ್ಲಿ ಮಿಂದ ಮಕ್ಕಳು..!



ದಾವಣಗೆರೆ ಫೆ 13 - ಗುರು-ಹಿರಿಯರ ಹಬ್ಬವೆಂದು ಪ್ರತೀತಿ ಹೊಂದಿರುವ ಷರಬಾನ್ ಹಬ್ಬವು ನಗರಾದ್ಯಂತ ಮುಸ್ಲಿಂ ಬಾಂಧವರು ಇಂದು ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಿ ಜಾಗರಣೆ ಆಚರಿಸಿದರು. ಎರಡನೇ ದಿನ ರಾತ್ರಿ ವಿಶೇಷ ಪ್ರಾರ್ಥನೆ ಸಲ್ಲಿಸಿ, ಈದ್ಗಾಗಳಿಗೆ ತೆರಳಿ ತಮ್ಮ ಸಂಬಂಧಿಗಳ, ಹಿರಿಯರ ಘೋರಿಗಳಿಗೆ ಸುಗಂಧ ಹೂ ಅರ್ಪಿಸಿ ದುವಾ ಮಾಡಿದರು. ವಿವಿಧ ಪ್ರದೇಶಗಳಿಂದ ಮಸೀದಿಗಳ ಪೇಷ್ ಇಮಾಂರೊಂದಿಗೆ ತಂಡ ತಂಡವಾಗಿ ಈದ್ಗಾದತ್ತ ಹೆಜ್ಜೆ ಹಾಕಿದ ಮಕ್ಕಳು ಇಡೀ ರಾತ್ರಿ ಪ್ರಾರ್ಥನೆಯನ್ನು ಸಲ್ಲಿಸಿ ಉಪವಾಸ ಆಚರಿಸಿದರು. ಚಿಕ್ಕ ಹೆಣ್ಣು ಮಕ್ಕಳು ಬಣ್ಣ - ಬಣ್ಣದ ಸೀರೆಗಳನ್ನು ಧರಿಸಿಕೊಂಡು ಖುಷಿಯಲ್ಲಿ ಮಿಂದು ತಮ್ಮ ಹಿರಿಯರ ಸ್ಮರಣೆಗೆ ನಾಂದಿಯಾದರು.


## ಲಿಂಗದಹಳ್ಳಿ ಜಿ.ಎಸ್. ನಾಗರಾಜ ನಿಧನ



ದಾವಣಗೆರೆ ತಾಲ್ಲೂಕು ಲಿಂಗದಹಳ್ಳಿ ಗ್ರಾಮದ ವಾಸಿ
ದಿ. ಶ್ರೀಮತಿ ಗೌರಮ್ಮ ದಿ. ಗೌಡ್ರ ಸಿದ್ದಪ್ಪನವರ ಮಗ

**ಜಿ.ಎಸ್. ನಾಗರಾಜ**

ಇವರು ದಿನಾಂಕ : 13.02.2025ರ ರಾತ್ರಿ 11.15ಕ್ಕೆ ನಿಧನರಾದರು. ಮೃತರಿಗೆ 56 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಅಂತ್ಯಕ್ರಿಯೆಯನ್ನು ದಿನಾಂಕ : 14.02.2025ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಲಿಂಗದಹಳ್ಳಿ ಗ್ರಾಮದ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : **ಶ್ರೀಮತಿ ಲತಾ ಮತ್ತು ಮಕ್ಕಳು, ಸಹೋದರರು, ಸಹೋದರಿಯರು ಹಾಗೂ ಗೌಡ್ರು ವಂಶಸ್ಥರು ಲಿಂಗದಹಳ್ಳಿ**



## ಸವಿ ನೆನಪು



**ಕಂದನಕೋವಿ ಬೆಳ್ಳೂಡಿ ಗೌರಮ್ಮ**

ನೀವು ನಮ್ಮನ್ನಗಲಿ ಇಂದಿಗೆ 15 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ...

**ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು**


## ವಿದಾಯ ದಿನಕ್ಕೆ 35 ಐಷಾರಾಮಿ ಕಾರುಗಳಲ್ಲಿ ಬಂದ ವಿದ್ಯಾರ್ಥಿಗಳು

(3ನೇ ಪುಟದಿಂದ) ಗುರುತಿಸಿದ್ದೇವೆ. ಇದುವರೆಗೂ 22 ಕಾರುಗಳನ್ನು ವಶಕ್ಕೆ ತೆಗೆದುಕೊಂಡಿದ್ದೇವೆ. ಕಾರುಗಳ ಮಾಲೀಕರಿಗೆ ನೋಟಿಸ್‌ಗಳನ್ನು ಕಳಿಸಲಾಗಿದೆ. ಮೂರು ಕಾರುಗಳನ್ನು ವಿದ್ಯಾರ್ಥಿಗಳು ಚಲಾಯಿಸುತ್ತಿದ್ದರು. ಇನ್ನು ಕೆಲವು ಕಾರುಗಳನ್ನು ಬಾಡಿಗೆ ಚಾಲಕರು ನಿರ್ವಹಿಸುತ್ತಿದ್ದರು. ಈ ಮೂವರು ವಿದ್ಯಾರ್ಥಿಗಳು ಚಾಲನಾ ಅನುಮತಿ ಹೊಂದಿರಲಿಲ್ಲ ಎಂದು ಬರೋತ್ ಹೇಳಿದ್ದಾರೆ.

ಕಾರಿನ ಚಾಲಕರು ಸ್ಟಂಟ್‌ಗಳನ್ನು ಸಹ ಮಾಡುತ್ತಿದ್ದರು. ಈ ಬಗ್ಗೆಯೂ ದಾಖಲಿಸಲಾಗಿದೆ ಎಂದವರು ಹೇಳಿದ್ದಾರೆ.

## ಬೆಳಲಗೆರೆ ವಿಎಸ್‌ಎಸ್‌ಎನ್ ಅಧ್ಯಕ್ಷರಾಗಿ ಶಿವಮೂರ್ತೆಪ್ಪ, ಉಪಾಧ್ಯಕ್ಷರಾಗಿ ತಮ್ಮಯ್ಯ



ಮಲೇಬೆನ್ನೂರು, ಫೆ.13- ಬೆಳಲಗೆರೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಟಿ.ಸಿ. ಶಿವಮೂರ್ತೆಪ್ಪ, ಉಪಾಧ್ಯಕ್ಷರಾಗಿ ತಮ್ಮಯ್ಯ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿರ್ದೇಶಕರಾದ ಎಸ್.ಸಿ.ಮುರುಗೇಶಪ್ಪ, ಬಿ.ಎಂ.ರೇವಣಸಿದ್ದಪ್ಪ, ಹೆಚ್.ಬಸವರಾಜಪ್ಪ, ಕೆ.ಕೆ.ಹನುಮಂತಪ್ಪ, ರಾಜಪ್ಪ, ಬಸವರಾಜಪ್ಪ, ಕುರ್ಕಿ ಹನುಮಂತಪ್ಪ, ಶ್ರೀಮತಿ ನೀಲಮ್ಮ, ಶ್ರೀಮತಿ ಜಯಮ್ಮ, ಹೆಚ್. ಹೊನ್ನಪ್ಪ ಮತ್ತು ಗ್ರಾಮಸ್ಥರು ಈ ವೇಳೆ ಹಾಜರಿದ್ದರು.

# ಜನತಾ ವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಫೆಬ್ರವರಿ 14, 2025


## ಇಡೀ ಕುಟುಂಬಗಳೇ ಜೀತಕ್ಕೆ

### ಜೀತ ಪದ್ಧತಿ ನಿರ್ಮೂಲನೆ ದಿನಾಚರಣೆ ಮತ್ತು ಕಾರ್ಯಾಗಾರದಲ್ಲಿ ಮುಕ್ತಿ ಅಲೈಯನ್ಸ್ ಪ್ರತಿನಿಧಿ ಬೃಂದಾ ಅಡಿಗ ಕಳವಳ




ದಾವಣಗೆರೆ, ಫೆ 13- ದಾವಣಗೆರೆ ಸೇರಿದಂತೆ ಹಲವು ಜಿಲ್ಲೆ, ನಗರಗಳ ಬಡವರ ಅನಿವಾರ್ಯತೆಯ ಲಾಭ ಪಡೆಯುವ ಕೆಲವರು, ಇಡೀ ಕುಟುಂಬಕ್ಕೆ ಕೆಲಸ ಕೊಡಿಸುವುದಾಗಿ ಬೆಂಗಳೂರಿಗೆ ಕರೆದೊಯ್ದು ಬಂಧನದಲ್ಲಿಟ್ಟು ದುಡಿಸಿಕೊಳ್ಳುತ್ತಿದ್ದಾರೆ ಎಂದು ಮುಕ್ತಿ ಅಲೈಯನ್ಸ್ ಪ್ರತಿನಿಧಿ ಬೃಂದಾ ಅಡಿಗ ಕಳವಳ ವ್ಯಕ್ತಪಡಿಸಿದರು.

ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾಡಳಿತ, ಜಿಪಂ, ಕಾರ್ಮಿಕ ಇಲಾಖೆ ಮತ್ತು ಮುಕ್ತಿ ಅಲೈಯನ್ಸ್ ಕರ್ನಾಟಕ ಸಹಯೋಗದಲ್ಲಿ ಜೀತ ಪದ್ಧತಿ ನಿರ್ಮೂಲನೆ ದಿನಾಚರಣೆ ಮತ್ತು ಕಾರ್ಯಾಗಾರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಜೀತ ಪದ್ಧತಿ ಎಂದರೆ ಮೇಲ್ನೋಟಕ್ಕೆ ಕಾರ್ಮಿಕರನ್ನು ಬಲವಂತವಾಗಿ ದುಡಿಸಿಕೊಳ್ಳುವ ಒಂದು ಮುಖ ಮಾತ್ರ ಕಾಣಿಸುತ್ತದೆ. ಆದರೆ ಇದರಿಂದ ಹಲವು ವಿಧದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ ಎಂದು ಹೇಳಿದರು.

ಬಡತನದಲ್ಲಿರುವ ಕುಟುಂಬದ ಯಜಮಾನನನ್ನು ಮಾತ್ರ ಜೀತ ಪದ್ಧತಿಗೆ ಸೆಳೆಯದೆ, ಇಡೀ ಕುಟುಂಬವನ್ನು ಜೀತಕ್ಕೆ ಹಚ್ಚುವ ಕೃತ್ಯಗಳು ಇತ್ತೀಚೆಗೆ ನಡೆಯುತ್ತಿವೆ. ಕುಟುಂಬದ ಎಲ್ಲ ಸದಸ್ಯರ ಸ್ವಾತಂತ್ರ್ಯದ ಹಕ್ಕು, ಮಕ್ಕಳ ಶಿಕ್ಷಣದ ಹಕ್ಕು ಕಳೆದುಕೊಳ್ಳುತ್ತಾರೆ ಎಂದರು.

ಮತ್ತೋರ್ವ ಪ್ರತಿನಿಧಿ ರಾಜೇಂದ್ರನ್ ಮಾತನಾಡುತ್ತಾ, ಇಟ್ಟಿಗೆ ಭಟ್ಟಿಗಳು, ಕಲ್ಲು ಕ್ವಾರಿ, ಅಡಿಕೆ ಸಂಬಂಧಿತ ಉದ್ಯಮ, ಖೇಣಿ ಮನೆಗಳು ಮತ್ತು ಅಕ್ಕಿ ಗಿರಣಿಗಳಲ್ಲಿ ಇಂದಿಗೂ ಜೀತದಾಳುಗಳನ್ನು ದುಡಿಸಿಕೊಳ್ಳಲಾಗುತ್ತಿದೆ. ಬಿಹಾರ, ಮಧ್ಯಪ್ರದೇಶ ಸೇರಿದಂತೆ, ಇತರೆ ರಾಜ್ಯಗಳು ಹಾಗೂ ಅಕ್ಕಪಕ್ಕದ ಜಿಲ್ಲೆಗಳ ಬಡ ಕಾರ್ಮಿಕರು ಜೀತದಾಳು ಪದ್ಧತಿಗೆ ಬಲಿಯಾಗುತ್ತಿದ್ದಾರೆ ಎಂದರು.

ಹರಿಹರ ಭಾಗದ ಇಟ್ಟಿಗೆ ಭಟ್ಟಿಗಳು, ದಾವಣಗೆರೆ ನಗರ, ತಾಲ್ಲೂಕು ಹಾಗೂ ಹರಿಹರ ತಾಲ್ಲೂಕುಗಳಲ್ಲಿರುವ ಅಕ್ಕಿ ಮಿಲ್‌ಗಳಲ್ಲೂ ಹೊರ ರಾಜ್ಯದ ಜೀತದಾಳುಗಳು ಇದ್ದಾರೆ ಎಂದರು.

ಕಾರ್ಯಾಗಾರಕ್ಕೂ ಮುನ್ನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ, ಸರ್ಕಾರದ ಯೋಜನೆಗಳಿಂದ ಬಡ ವರೂ ಸಹ ಬದುಕನ್ನು ಕಟ್ಟಿಕೊಂಡಿದ್ದು ಜೀತ ಪದ್ದತಿ ನಿರ್ಮೂಲನೆಗೂ ಸಹಕಾರಿಯಾಗಿದೆ ಎಂದರು.

ಹಿಂದಿನ ದಿನಮಾನದಲ್ಲಿ ಶ್ರೀಮಂತರಿಂದ ಹಣ ಪಡೆದು ಹಣ ತೀರುವಳಿಗೆ ಕೆಲಸ ಮಾಡುವ ಪದ್ದತಿ ಇತ್ತು. ಆದರೆ ಈಗ ಕಾಲ ಬದಲಾಗಿದೆ. ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಿಂದ ಬಡವರು ಉತ್ತಮ ಬದುಕನ್ನು ಕಟ್ಟಿಕೊಳ್ಳುವಂತಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್.ಬಿ.ಇಟ್ನಾಳ್ ಮಾತನಾಡಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜೀತ ಪದ್ದತಿ ಕಂಡು ಬಂದಿರುವುದಿಲ್ಲ. ಜೀತ ಕಾರ್ಮಿಕರು ಕಂಡು ಬಂದರೆ ಅವರಿಗೆ ವಸತಿ ಕಲ್ಪಿಸುವುದು, ಸ್ವ ಉದ್ಯೋಗಕ್ಕಾಗಿ ಕೌಶಲ್ಯ ತರಬೇತಿ, ವಿದ್ಯಾಭ್ಯಾಸ, ಉದ್ಯೋಗ ಹಾಗೂ ಬ್ಯಾಂಕ್‌ಗಳಲ್ಲಿ ಸಾಲ ನೀಡುವ ಮೂಲಕ ಅವರನ್ನು ಆರ್ಥಿಕವಾಗಿ ಸದೃಢರನ್ನಾಗಿ ಮಾಡಲು ಗ್ರಾಮ ಪಂಚಾಯಿತಿ ಹಾಗೂ ವಿವಿಧ ಇಲಾಖೆಗಳ ಮೂಲಕ ಕಾರ್ಯಕ್ರಮಗಳ ಅನುಷ್ಠಾನ ಮಾಡಲಾಗುತ್ತಿದೆ ಎಂದರು.

ಜಿಲ್ಲೆಯಲ್ಲಿ ಜೀತ ಪದ್ದತಿ ನಿರ್ಮೂಲನಾ ಸಮಿತಿ ರಚನೆ ಮಾಡಲಾಗಿದೆ, ಜಿಲ್ಲಾ ಮಟ್ಟದ ಸಮಿತಿಯಲ್ಲಿ ನ್ಯಾಯಾಧೀಶರು ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಸಿಇಒ ಹಾಗೂ (5ನೇ ಪುಟಕ್ಕೆ)

# ಬಲವಂತ ಬಡ್ಡಿ ವಸೂಲಿಗೆ ದಂಡ

## 10 ವರ್ಷ ಕಾರಾಗೃಹ ಸೆರೆವಾಸ ಹಾಗೂ 5 ಲಕ್ಷ ರೂ. ವರೆಗೂ ದಂಡ

ಬೆಂಗಳೂರು, ಫೆ. 13- ಬಲವಂತವಾಗಿ ಸಾಲದ ಮೇಲಿನ ಬಡ್ಡಿ ವಸೂಲಿ ಮಾಡುವ ವ್ಯಕ್ತಿಗಳಿಗೆ 10 ವರ್ಷ ಕಾರಾಗೃಹ ಸೆರೆವಾಸ ಹಾಗೂ 5 ಲಕ್ಷ ರೂವರೆಗೂ ದಂಡ ವಿಧಿಸಲು ಹೊಸ ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಮೈಕ್ರೊ ಫೈನಾನ್ಸ್ ಸಂಸ್ಥೆಗಳು ಮತ್ತು ಇತರೆ ಸಾಲ ನೀಡಿಕೆ ಏಜೆನ್ಸಿಗಳು ಅಥವಾ ಲೇವಾದೇವಿಗಾರರು ವಿಧಿಸುವ ಹೆಚ್ಚಿನ ಬಡ್ಡಿ ದರಗಳಿಂದ ಸಾಲ ಪಡೆದವರಿಗೆ ಆಗುವ ಹೊರೆ ಮತ್ತು ಬಲವಂತದ ವಸೂಲಾತಿ ತಪ್ಪಿಸಲು ರಾಜ್ಯಪಾಲರ ಅಂಕಿತದೊಂದಿಗೆ ಸರ್ಕಾರ ಜಾರಿಗೆ ತಂದಿರುವ ಸುಗ್ರೀವಾಜ್ಞೆಯಲ್ಲಿ ಈ ಅಂಶಗಳು ಒಳಗೊಂಡಿವೆ.

ಇಂತಹ ಅಪರಾಧ ಎಸಗುವವರಿಗೆ ಜಾಮೀನು ಇರುವುದಿಲ್ಲ, ಯಾವುದೇ ಪೊಲೀಸ್ ಅಧಿಕಾರಿ ಇಂತಹ ಪ್ರಕರಣಗಳನ್ನು ನೋಂದಣಿ ಮಾಡಿಕೊಳ್ಳಲು ನಿರಾಕರಿಸುವಂತಿಲ್ಲ.

ಸಂಕಷ್ಟಕ್ಕೊಳಗಾದ ವ್ಯಕ್ತಿ ನೀಡದಿದ್ದರೆ, ಡಿವೈಎಸ್‌ಪಿ ಹಾಗೂ ಮೇಲಿನ ಅಧಿಕಾರಿಗಳು ಪ್ರಕರಣವನ್ನು ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡು ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರ ನೀಡಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನೋಂದಾಯಿತವಲ್ಲದ ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಗೆ ಮಾತ್ರ ಈ ಆಧ್ಯಾದೇಶ ಅನ್ವಯವಾಗುತ್ತದೆ.

ಈ ಸುಗ್ರೀವಾಜ್ಞೆಯಿಂದ ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನೋಂದಾಯಿತವಲ್ಲದ ಮೈಕ್ರೊ ಫೈನಾನ್ಸ್ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತು ಹೆಚ್ಚುತ್ತದೆ ಮತ್ತು ಸಾಲ ಪಡೆದವರಿಗೆ ಕಿರುಕುಳ, ಬಲವಂತದ ವಸೂಲಿ ಕ್ರಮಗಳಿಂದ ಮುಕ್ತಿ ದೊರೆಯುತ್ತದೆ.

**ರಾಜ್ಯಪಾಲರ ಅಂಕಿತದೊಂದಿಗೆ ಸರ್ಕಾರ ಜಾರಿಗೆ ತಂದಿರುವ ಸುಗ್ರೀವಾಜ್ಞೆಯಲ್ಲಿ ಶಿಕ್ಷೆಗೆ ಅವಕಾಶ**



ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪತ್ರಿಕಾ ಹೇಳಿಕೆ ನೀಡಿ, ಸುಗ್ರೀವಾಜ್ಞೆಯಲ್ಲಿರುವ ಪ್ರಮುಖ ಅಂಶಗಳನ್ನು ಜನರಿಗೆ ಮುಟ್ಟಿಸುವ ಪ್ರಯತ್ನ ಮಾಡಿದ್ದಾರೆ.

ಕರ್ನಾಟಕ ಕಿರು (ಮೈಕ್ರೊ) ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ಆಧ್ಯಾದೇಶ-2025 ಫೆಬ್ರವರಿ 12 ರಿಂದಲೇ ಜಾರಿಗೆ ಬಂದಿದೆ.

ಇದರಿಂದ ವಿಶೇಷವಾಗಿ ದುರ್ಬಲರು, ಮಹಿಳೆಯರು ಮತ್ತು ರೈತರು, ಮಹಿಳಾ ಸ್ವಸಹಾಯ ಸಂಘಗಳಿಗೆ ಸಾಲ ಮರುಪಾವತಿ ವಿಷಯದಲ್ಲಿ ಕಿರುಕುಳ ತಪ್ಪಿಸಲು ಸಹಾಯಕವಾಗಿರುತ್ತದೆ. ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಸಾಲ ನೀಡುವ ವೇಳೆ ಯಾವುದೇ ಭದ್ರತೆ ಪಡೆಯುವಂತಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಗ್ರಾಹಕರಿಗೆ ವಿಧಿಸುವ ಬಡ್ಡಿ ದರದ ಬಗ್ಗೆ ಪಾರದರ್ಶಕವಾಗಿ ಸಾಲಗಾರರಿಗೆ ಲಿಖಿತ ರೂಪದಲ್ಲಿ ತಿಳಿಸುವಂತೆ ಆದೇಶಿಸಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನೋಂದಾಯಿತ ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ಅಂದಾಜು 60,000 ಕೋಟಿ ರೂ. ಸಾಲವನ್ನು ಸುಮಾರು 1.09 ಕೋಟಿ ಸಾಲಗಾರರು ಪಡೆದಿದ್ದು, ನೋಂದಣಿಯಾಗದ ಸಂಸ್ಥೆಗಳಿಂದ ಸಾಲ ಪಡೆದವರ ಪೂರ್ಣ ವಿವರ ಇಲ್ಲವಾದರೂ, ಅಂದಾಜು 40,000 ಕೋಟಿ ರೂ.ವರೆಗೆ ಸಾಲ ಪಡೆದಿರಬಹುದು ಎಂದು ಅಂದಾಜಿಸಲಾಗಿದೆ.

ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಆಯಾ ಜಿಲ್ಲಾಧಿಕಾರಿಗಳಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದೆ, ಸದರಿ ಸಂಸ್ಥೆಗಳು ತಾವು ವಿಧಿಸುವ ಬಡ್ಡಿ ದರ, ಸಾಲಗಾರರ ಮಾಹಿತಿ, ಸುಸ್ತಿ ಸಾಲಗಳ ವಿವರ ಮುಂತಾದವುಗಳನ್ನು ಜಿಲ್ಲಾಧಿಕಾರಿಗೆ ನೀಡಬೇಕಾಗಿರುತ್ತದೆ.

ಜಿಲ್ಲಾಧಿಕಾರಿಗಳಿಗೆ ತ್ರೈಮಾಸಿಕ ಮತ್ತು ವಾರ್ಷಿಕ ವ್ಯವಹಾರದ ವಿವರಗಳನ್ನು ಈ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಸಲ್ಲಿಸಬೇಕು, ಮಾಹಿತಿ ಸಲ್ಲಿಸದಿದ್ದಲ್ಲಿ, 6 ತಿಂಗಳ ಕಾರಾಗೃಹ ವಾಸ ಅಥವಾ 10,000 ರೂ.ಗಳವರೆಗೆ ವಿಸ್ತರಿಸಬಹುದಾದ ದಂಡ (ಜುಲ್ಮಾನೆ) ಅಥವಾ ಅವೆರಡರಿಂದಲೂ ದಂಡಿತರಾಗುತ್ತಾರೆ.

ಸಾಲ ವಿವಾದಗಳ ಇತ್ಯರ್ಥಕ್ಕೆ ಒಂಬುಡ್ಸ್‌ಮನ್‌ಗಳನ್ನು ಅಧಿಸೂಚನೆ ಮೂಲಕ ಸರ್ಕಾರ ನೇಮಕ ಮಾಡಬಹುದಾಗಿದೆ.

ಈ ಅಪರಾಧಗಳು ಸಂಜ್ಞೇಯ ಹಾಗೂ (5ನೇ ಪುಟಕ್ಕೆ)

## ವಿದಾಯ ದಿನಕ್ಕೆ 35 ಐಷಾರಾಮಿ ಕಾರುಗಳಲ್ಲಿ ಬಂದ ವಿದ್ಯಾರ್ಥಿಗಳು

ಸೂರತ್, ಫೆ.13 - ಗುಜರಾತ್‌ನ 12ನೇ ತರಗತಿ ವಿದ್ಯಾರ್ಥಿಗಳ ಗುಂಪೊಂದು ಶಾಲೆಯ ವಿದಾಯ ದಿನ ಸಮಾರಂಭಕ್ಕಾಗಿ 35 ಐಷಾರಾಮಿ ಕಾರುಗಳಲ್ಲಿ ಬಂದ ಘಟನೆ ನಡೆದಿದೆ.

ಈ ರೀತಿ ಕಾರುಗಳ ಮೆರವಣಿಗೆಯಲ್ಲಿ ಬರುವಾಗ ಸಂಚಾರಿ ನಿಯಮಗಳನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ ಹಾಗೂ 22 ಕಾರುಗಳನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.





**ಸಂಚಾರಿ ನಿಯಮಗಾಳಿಗೆ ತೂರಿದ್ದಕ್ಕಾಗಿ 6 ಎಫ್‌ಐಆರ್**

ಫೆಬ್ರವರಿ 7ರಂದು ಐಷಾರಾಮಿ ಕಾರುಗಳಲ್ಲಿ ಶಾಲಾ ವಿದ್ಯಾರ್ಥಿಗಳು ಬರುವ ವಿಡಿಯೋಗಳು ವೈರಲ್ ಆಗಿದ್ದವು. ಕೆಲವರು ತಮ್ಮ ಕೈಗಳಲ್ಲಿ ಹೊಗೆ ಬಂದೂಕುಗಳನ್ನು ಹಿಡಿದಿದ್ದರು ಹಾಗೂ ಅಪಾಯಕಾರಿಯಾಗಿ ಕಾರಿನ ಬಾಗಿಲುಗಳ ಬಳಿ ಕುಳಿತಿದ್ದರು. ಇನ್ನು ಕೆಲವರು ಕಾರಿನ ಮೇಲ್ಚಾವಣಿಯಿಂದ ಹೊರಗೆ ತಲೆ ಹಾಕಿದ್ದರು.

ಸೂರತ್ ನಗರದ ಫೌಂಟೇನ್‌ಹೆಡ್ ಶಾಲೆಯ ವಿದ್ಯಾರ್ಥಿಗಳು ಈ ರೀತಿ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಈ ದೃಶ್ಯಗಳು ನಗರದ ಜನರಿಗೆ ಆಘಾತ ನೀಡಿದ್ದವು. ವಿದ್ಯಾರ್ಥಿಗಳು ಈ ರೀತಿ ಕಾರುಗಳಲ್ಲಿ ಬರುವಂತೆ ತಿಳಿಸಿರಲಿಲ್ಲ ಎಂದು ಶಾಲೆಯ ಆಡಳಿತ ಮಂಡಳಿ ಹೇಳಿದೆ. ಈ ಘಟನೆಗೆ ಸಂಬಂಧಿಸಿದಂತೆ ಆರು ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ ಎಂದು ಡಿಸಿಪಿ ಆರ್.ಪಿ. ಬರೋತ್ ಹೇಳಿದ್ದಾರೆ.

ನಾವು 35 ಕಾರುಗಳ ಪೈಕಿ 26 ಕಾರುಗಳನ್ನು (2ನೇ ಪುಟಕ್ಕೆ)

## ಮುಡಾ: ಸಾವಿರಕ್ಕೂ ಹೆಚ್ಚು ಬಿಡಿ ನಿವೇಶನ ಅಕ್ರಮ ಹಂಚಿಕೆ; ಕೋಟ್ಯಂತರ ರೂ. ನಷ್ಟ

ಬೆಂಗಳೂರು, ಫೆ. 13- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಿಂದ ಒಂದು ಸಾವಿರಕ್ಕೂ ಹೆಚ್ಚು ಬಿಡಿ ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂ. ನಷ್ಟ ಉಂಟು ಮಾಡಲಾಗಿದೆ ಎಂದು ಲೋಕಾಯುಕ್ತ ತನ್ನ ವರದಿಯಲ್ಲಿ ತಿಳಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬಕ್ಕೆ ಭೂ ಸ್ವಾಧೀನಕ್ಕೆ ಪರ್ಯಾಯವಾಗಿ 14 ನಿವೇಶನಗಳನ್ನು ನೀಡುವ ಅವಶ್ಯಕತೆ ಇರಲಿಲ್ಲ ಎಂದಿದೆ.

ನ್ಯಾಯಾಲಯದ ಆದೇಶದಂತೆ ಮುಖ್ಯಮಂತ್ರಿ ಕುಟುಂಬಕ್ಕೆ 14 ನಿವೇಶನಗಳನ್ನು ನೀಡಿರುವ ಸಂಬಂಧ ತನಿಖೆ ನಡೆಸಿದ ಮೈಸೂರು ಲೋಕಾಯುಕ್ತ ಎಸ್‌ಪಿ ಉದೇಶ್, ತಮ್ಮ ವರದಿಯಲ್ಲಿ ಅಕ್ರಮಗಳ ಬಗ್ಗೆ ದಾಖಲೆ ಸಮೇತ ಕೇಂದ್ರ ಕಚೇರಿಗೆ ನೀಡಿದ್ದಾರೆ.

ಯಾವುದೇ ರಾಜಕೀಯ ಒತ್ತಡಕ್ಕೆ ಮಣಿದು ಮುಖ್ಯಮಂತ್ರಿ ಅವರ ಕುಟುಂಬಕ್ಕೆ ನಿವೇಶನಗಳನ್ನು ಮುಡಾ ನೀಡಿಲ್ಲ ಎನ್ನುವ ಮೂಲಕ ಸಿದ್ದರಾಮಯ್ಯ ಅವರಿಗೆ ಕ್ಲೀನ್ ಚಿಟ್ ನೀಡಿದೆ. ವಿವಿಧ ಕಾರಣಗಳನ್ನು ಮುಂದೊಡ್ಡಿ ಬಿಡಿ ನಿವೇಶನಗಳನ್ನು ಕೇಳಿದವರಿಗೆ ಒಟ್ಟಾರೆಯಾಗಿ ಒಂದು ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ಅಧಿಕಾರಿಗಳು ಹಂಚಿಕೆ ಮಾಡಿ ಭಾರೀ ಲೋಪ ಎಸಗಿದ್ದಾರೆ. (5ನೇ ಪುಟಕ್ಕೆ)

**ತಮ್ಮ ವರದಿಯಲ್ಲಿ ಅಕ್ರಮಗಳ ಬಗ್ಗೆ ದಾಖಲೆ ಸಮೇತ ಕೇಂದ್ರ ಕಚೇರಿಗೆ ನೀಡಿದ ಮೈಸೂರು ಲೋಕಾಯುಕ್ತ ಎಸ್‌ಪಿ ಉದೇಶ್**

## ದಾವಣಗೆರೆ ಮಹಾನಗರ ಪಾಲಿಕೆ ಸೇರಿದಂತೆ, ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಿದ್ಧತೆ

ಬೆಂಗಳೂರು, ಫೆ.13- ಅಧಿಕಾರವಧಿ ಮುಕ್ತಾಯಗೊಂಡಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ವಾರ್ಡ್‌ವಾರು ಮೀಸಲಾತಿಯನ್ನು ಹೊರಡಿಸಿ ತನಗೆ ಒದಗಿಸುವಂತೆ ರಾಜ್ಯ ಚುನಾವಣಾ ಆಯೋಗವು ರಾಜ್ಯ ಸರ್ಕಾರದ ನಗರಾಭಿವೃದ್ಧಿ ಇಲಾಖೆ ಪರ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದೆ.

ಶಿವಮೊಗ್ಗ, ತುಮಕೂರು, ಮೈಸೂರು ಮತ್ತು ಮಂಗಳೂರು ಮಹಾನಗರ ಪಾಲಿಕೆಗಳ ಅಧಿಕಾರವಧಿ ಈಗಾಗಲೇ ಮುಕ್ತಾಯಗೊಂಡಿದ್ದು, ದಾವಣಗೆರೆ ಮಹಾನಗರ ಪಾಲಿಕೆ ಅಧಿಕಾರವಧಿ ಇದೇ ದಿನಾಂಕ 19ಕ್ಕೆ ಪೂರ್ಣಗೊಳ್ಳಲಿದೆ. ಅಲ್ಲದೇ, 195 ನಗರ, ಸ್ಥಳೀಯ ಸಂಸ್ಥೆಗಳ ಅಧಿಕಾರವಧಿ ಮುಕ್ತಾಯದ ಹಂತದಲ್ಲಿವೆ.

ಈ ಹಿನ್ನೆಲೆಯಲ್ಲಿ ಸಾರ್ವತ್ರಿಕ ಚುನಾವಣೆ ನಡೆಸುವ ಸಂಬಂಧ ನಿಯಮಾನುಸಾರ ಚುನಾವಣೆ ನಡೆಸಲು ಅನುವಾಗುವಂತೆ ವಾರ್ಡ್‌ವಾರು ಮೀಸಲಾತಿ ಅಧಿಸೂಚನೆಯನ್ನು ಹೊರಡಿಸುವಂತೆ ಆಯೋಗವು ಪತ್ರದಲ್ಲಿ ತಿಳಿಸಿದೆ.

## ಅಮೆರಿಕ ಸರ್ಕಾರದ ಸಂಪೂರ್ಣ ಏಜೆನ್ಸಿಗಳು 'ಡಿಲೀಟ್' : ಮಸ್ಕ್ ಕರೆ

ದುಬೈ, ಫೆ. 13 - ಅಮೆರಿಕ ಆಡಳಿತ ಯಂತ್ರದ ಗಾತ್ರ ಕಡಿಮೆ ಮಾಡಲು ಹಾಗೂ ಸಂಪೂರ್ಣವಾಗಿ ಪುನರ್ ರಚಿಸುವ ಉದ್ದೇಶದಿಂದ ಸರ್ಕಾರದ ಹಲವಾರು ಸಂಸ್ಥೆಗಳನ್ನು ಸಂಪೂರ್ಣ ತೆಗೆದುಹಾಕಲು ಎಲಾನ್ ಮಸ್ಕ್ ಕರೆ ನೀಡಿದ್ದಾರೆ.

ದುಬೈನಲ್ಲಿ ನಡೆಯುತ್ತಿರುವ ವಿಶ್ವ ಆಡಳಿತ ಶೃಂಗಸಭೆಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿರುವ (5ನೇ ಪುಟಕ್ಕೆ)

## ಚೀನಾ ಸೈಬರ್ ಅಪರಾಧಿಗಳಿಗೆ ಬ್ಯಾಂಕ್ ಖಾತೆ : ಬಂಧನ

ಅಹಮದಾಬಾದ್,ಫೆ.13 - ಚೀನಾದ ಸೈಬರ್ ಅಪರಾಧಿಗಳಿಗೆ ಹಣ ರವಾನಿಸಲು ಬ್ಯಾಂಕ್ ಖಾತೆಗ ಳನ್ನು ತೆರೆಯಲು ವಂಚನಾತ್ಮಕವಾಗಿ ನೆರವಾಗುತ್ತಿದ್ದ 11 ಜನರ ತಂಡವನ್ನು ಗುಜರಾತ್ ಪೊಲೀಸರು ಬಂಧಿಸಿದ್ದಾರೆ.

ದೇಶಾದ್ಯಂತ ವಂಚನೆ ನಡೆಸಲು ಬ್ಯಾಂಕ್ ಖಾತೆಗಳನ್ನು ಬಳಸುತ್ತಿದ್ದ ಬಗ್ಗೆ 109 ದೂರುಗಳು ದಾಖಲಾಗಿದ್ದವು ಎಂದು ಅಹಮದಾಬಾದ್ ಪೊಲೀಸರ ಸೈಬರ್ ಅಪರಾಧ ದಳ ತಿಳಿಸಿದೆ.

ಫೋರ್ಜರಿ ಆಧಾರ್ ಕಾರ್ಡುಗಳನ್ನು ಬಳಸಿ ಈ ತಂಡ ಬ್ಯಾಂಕ್ ಖಾತೆಗಳನ್ನು ತೆರೆಯುತ್ತಿತ್ತು. ಈ ಖಾತೆಗಳನ್ನು ಚೀನಾದ ಸೈಬರ್ ಅಪರಾಧಿಗಳು ಬಳಸುತ್ತಿದ್ದರು. ಡಿಜಿಟಲ್ ಬಂಧನ, ಉದ್ಯೋಗ ವಂಚನೆ ಹಾಗೂ ಹೂಡಿಕೆ (5ನೇ ಪುಟಕ್ಕೆ)

# ಅಚ್ಚುಕಟ್ಟು ಕೊನೆ ಭಾಗಕ್ಕೆ ತಲುಪದ ಭದ್ರಾ ನೀರು ರೈತರಿಂದ ಹೆದ್ದಾರಿ ತಡೆದು ಪ್ರತಿಭಟನೆ



ಮಲೇಬೆನ್ನೂರು, ಫೆ.13- ಭದ್ರಾ ಶಾಖಾ ನಾಲಾ 3ನೇ ಉಪವಿಭಾಗದ 10ನೇ ಉಪನಾಲೆಯಲ್ಲಿ ಆಂತರಿಕ ಸರದಿ ಪಾಲಿಸದ ಕಾರಣ ಅಚ್ಚುಕಟ್ಟಿನ ಕೊನೆ ಭಾಗಕ್ಕೆ ನಿಗದಿತ ಪ್ರಮಾಣದಲ್ಲಿ ನೀರು ಬರುತ್ತಿಲ್ಲ ಎಂದು ಆರೋಪಿಸಿದ ರೈತರು ಬುಧವಾರ ರಾಜ್ಯ ಹೆದ್ದಾರಿ - 25ರಲ್ಲಿ ರಸ್ತೆ ತಡೆ ನಡೆಸಿದರು.

10ನೇ ಉಪನಾಲೆ ವ್ಯಾಪ್ತಿಯ ರೈತರ ಒತ್ತಡಕ್ಕೆ ಮಣಿದು 2 ದಿನ ಹೆಚ್ಚುವರಿಯಾಗಿ ಇಂಜಿನಿಯರ್‌ಗಳು ನೀರು ಹರಿಸುತಿದ್ದಾರೆ. ಆಂತರಿಕ ಸರದಿಯಂತೆ 10, 10 ಎ, 12, 12ಎ, 11ಬಿ ಹಾಗೂ 14ನೇ ಉಪನಾಲೆಗಳಿಗೆ ನೀರು ಹರಿಸಬೇಕಿತ್ತು.

ಅಚ್ಚುಕಟ್ಟು ವ್ಯಾಪ್ತಿಯ 11ಎ, 13, 11ಸಿ, ಡಿ, ಇ, ಎಫ್, 15, 16, 17ನೇ ಉಪನಾಲೆಗಳಿಗೆ ನೀರು ಹರಿದು ಬರುತ್ತಿಲ್ಲ. ಆಂತರಿಕ ಸರದಿ ಉಲ್ಲಂಘನೆ ಮಾಡಲಾಗಿದೆ ಎಂದು ಹೊಳೆಸಿರಿಗೆರೆ, ಕಮಲಾಪುರ, ಲಕ್ಕಶೆಟ್ಟಿಹಳ್ಳಿ ರೈತರು ವಾಗ್ವಾದ ನಡೆಸಿ, ರಸ್ತೆ ತಡೆಗೆ ಮುಂದಾದರು.

ಘಟನಾ ಸ್ಥಳಕ್ಕೆ ಆಗಮಿಸಿದ ಪೊಲೀಸರು ನಾಲೆ ನೀರು ಸಮಸ್ಯೆ ಎಂಜಿನಿಯರ್‌ರೊಂದಿಗೆ ಚರ್ಚಿಸಿ ಬಗೆಹರಿಸಿಕೊಳ್ಳಿ, ಪ್ರಯಾಣಿಕರಿಗೆ ತೊಂದರೆ ಮಾಡಬೇಡಿ, ರಸ್ತೆ ತಡೆ ಕೈಬಿಡಿ ಎಂದರು.

ರಾಜಕಾರಣಿಗಳು, ಇಂಜಿನಿಯರ್‌ಗಳು, ಡಿಸಿ, ತಹಶೀಲ್ದಾರ್ ಬಗ್ಗೆ ವಿಶ್ವಾಸ ಇಲ್ಲ. ಕೊನೆ ಭಾಗದ ರೈತರ ನೀರಿನ ಸಮಸ್ಯೆ ಬಗ್ಗೆ ಯಾರಿಗೂ ಇಚ್ಛಾಶಕ್ತಿ ಇಲ್ಲ. ಒಮ್ಮೆ ಕೂಡ ಯಾರೊಬ್ಬರು ಜಮೀನಿಗೆ ಕಾಲಿಡುವ ಧೈರ್ಯ ಮಾಡಿಲ್ಲ.

ಜಿಲ್ಲಾಡಳಿತ, ಪೊಲೀಸ್, ಕಾನೂನು ಸುವ್ಯವಸ್ಥೆ ಬಗ್ಗೆ ನೀವು ಮಾತನಾಡುತ್ತೀರಿ. ನಮ್ಮ ಜಮೀನಿಗೆ ನೀರು ಪಡೆಯುವುದು ನಮ್ಮ ಹಕ್ಕು, ಹೋರಾಟ ಮಾಡುವುದು ಕೂಡಾ ಅನಿವಾರ್ಯ ಎಂದು ರೈತರು ಪೊಲೀಸರಿಗೆ ಎಚ್ಚರಿಸಿದರು.

ಕೊನೆ ಭಾಗದ ಜಮೀನುಗಳಿಗೆ ನೀರು ಹರಿಸಿದರೆ, ನಾವು ನಿಮಗೆ ತೊಂದರೆ ನೀಡುವ ಬದಲು ನಮ್ಮ ನಮ್ಮ ಹೊಲದಲ್ಲಿ ಕೆಲಸ ಮಾಡುತ್ತಾ ಇರ್ತೇವೆ ಎಂದು ರೈತರು ಹರಿಹಾಯ್ದರು.

ಕೊನೆಗೂ ಪೊಲೀಸರು ರೈತರ ಜೊತೆ ಸಂಧಾನ ನಡೆಸಿ, ರಸ್ತೆ ತಡೆ ತೆರವು ಮಾಡಿಸಿದರು. ನಂತರ ನೀರಾವರಿ ಕಚೇರಿಯಲ್ಲಿ ಪ್ರತಿಭಟನೆ ಮುಂದುವರೆದಿತ್ತು. ಬಸವಾಪಟ್ಟಣ ಉಪವಿಭಾಗದ ಎಇಇ ಧನಂಜಯ ಅವರು ರೈತರೊಂದಿಗೆ ಮಾತನಾಡಿದರು.

ಆಂತರಿಕ ಸರದಿ ಬದಲಾವಣೆ ಕುರಿತು ಪ್ರಕಟಣೆ ಹೊರಡಿಸಬೇಕು. 11 ದಿನ ಆಂತರಿಕ ಸರದಿ ರೂಪಿಸಿ, ಕೊನೆಭಾಗಕ್ಕೆ ನೀರು ಹರಿಸಿ ಎಂದು ರೈತರು ಪಟ್ಟುಹಿಡಿದರು.

ನಾಲೆಯಲ್ಲಿ ಕಡಿಮೆ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಇಂಜಿನಿಯರ್‌ಗಳು ಆಂತರಿಕ ಸರದಿ ಉಲ್ಲಂಘಿಸಿದರೆ, ಕೊನೆ ಭಾಗಕ್ಕೆ ಹೇಗೆ ನೀರು ತಲುಪುತ್ತದೆ ? ತಾರತಮ್ಯದ ಕೆಲಸವನ್ನು ಬೇಸಿಗೆ ವೇಳೆ ಮಾಡಬೇಡಿ ಎಂದು ರೈತರು ಇಂಜಿನಿಯರ್‌ರನ್ನು ತರಾಟೆಗೆ ತಗೆದುಕೊಂಡರು.

ರೈತರ ಒತ್ತಡಕ್ಕೆ ಮಣಿದ ಎಇಇ ಅವರು 10ನೇ ಉಪನಾಲೆ ಗೇಟ್ ಹಾಕಿಸಿದರು. ಆಗ ರೈತರು ಪ್ರತಿಭಟನೆ ಕೈಬಿಟ್ಟರು.

ಗ್ರಾ.ಪಂ ಅಧ್ಯಕ್ಷ ರಮೇಶ್, ಗಂಗಾಧರ್, ವಸಂತಣ್ಣ, ಬಸವರಾಜ್, ಹಳೇಮನೆ ನಾಗರಾಜ್, ಕೊಟ್ರೇಶ್, ಷಣ್ಮುಖಪ್ಪ, ಮಲ್ಲಪ್ಪ, ಮಲ್ಲಿಕಾರ್ಜುನ್, ಗಣೇಶ್, ಬೀರಪ್ಪ, ಬಳ್ಳಾರಿ ಕರಿಬಸಪ್ಪ ಸೇರಿದಂತೆ ಇನ್ನೂ ಅನೇಕ ರೈತರು ಈ ವೇಳೆ ಇದ್ದರು. ಪೊಲೀಸರು ಭದ್ರತೆ ಒದಗಿಸಿದ್ದರು.

# ಧಾರ್ಮಿಕ, ಸಾಂಸ್ಕೃತಿಕ ವಿಚಾರಗಳನ್ನು ಜಗತ್ತಿಗೆ ನೀಡಿದ ಶ್ರೇಷ್ಠ ಧರ್ಮ ವೀರಶೈವ ಧರ್ಮ



**ಹರಪನಹಳ್ಳಿಯ ಕಾರ್ಯಕ್ರಮದಲ್ಲಿ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ**

ಹರಪನಹಳ್ಳಿ, 13 - ತಾಲ್ಲೂಕು ವೀರಶೈವ ಲಿಂಗಾಯತ ಮಹಾಸಭಾಕ್ಕೆ ಪಟ್ಟಣದಲ್ಲಿ ಸಭಾ ಭವನ ಹಾಗೂ ಸ್ಮಶಾನ ನಿರ್ಮಾಣಕ್ಕೆ ನಿವೇಶನ ಕೊಡಿಸಲು ಪ್ರಯತ್ನಿಸುತ್ತೇನೆ ಎಂದು ಶಾಸಕರಾದ ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಭರವಸೆ ನೀಡಿದರು.

ಪಟ್ಟಣದ ತೆಗ್ಗಿನ ಮಠದ ಸಭಾ ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಘಟಕ ಬುಧವಾರ ಹಮ್ಮಿಕೊಂಡಿದ್ದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಾಗೂ ವಿವಿಧ ಸಾರ್ವಜನಿಕ ಸಂಸ್ಥೆಗಳಿಗೆ ಆಯ್ಕೆಯಾದ ಮಹಾ ಸಭಾದ ಸದಸ್ಯರುಗಳಿಗೆ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಎಲ್ಲಾ ಒಳಪಂಗಡಗಳು ಒಟ್ಟಾಗಿ ಹೋಗಬೇಕು, ಕೆಲವರು ಸ್ವಾರ್ಥಕ್ಕಾಗಿ ಉಪ ಜಾತಿಗಳನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ, ಇನ್ನು ಕೆಲವರು ಸರ್ಕಾರಿ ಸೌಲಭ್ಯ ಪಡೆಯಲು ಈ ರೀತಿ ಮಾಡುತ್ತಾರೆ. ಇದನ್ನು ಬಿಟ್ಟು ಎಲ್ಲರೂ ಮಹಾ ಸಭಾದಂತೆ ಹೋಗಬೇಕು ಎಂದು ಹೇಳಿದರು.

ತೆಗ್ಗಿನ ಮಠ ಸಂಸ್ಥಾನದ ಪೀಠಾಧ್ಯಕ್ಷರೂ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾದ ತಾಲ್ಲೂಕು ಗೌರವಾಧ್ಯಕ್ಷರೂ ಆದ ಶ್ರೀ ವರ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಪ್ರಾಚೀನ ಇತಿಹಾಸವನ್ನು ನಾವೆಲ್ಲರೂ ತಿಳಿದುಕೊಳ್ಳಬೇಕು, ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಚಾರಗಳನ್ನು ಜಗತ್ತಿಗೆ ನೀಡಿದ ಶ್ರೇಷ್ಠ ಧರ್ಮ ವೀರಶೈವ ಧರ್ಮ ಎಂದು ನುಡಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಕೆ.ಬಿ. ಶ್ರೀನಿವಾಸರೆಡ್ಡಿ ಮಾತನಾಡಿ, ವೀರಶೈವ ಲಿಂಗಾಯತ ಮಹಾಸಭಾ ಇದೊಂದು ಜಾತಿ ಅಲ್ಲ ಧರ್ಮ, ಇದಕ್ಕಾಗಿ ಸಾಕಷ್ಟು ಹೋರಾಟ ನಡೆದಿದೆ, ಆದಷ್ಟು ಬೇಗ ಈಡೇರಲಿದೆ ಕೇಂದ್ರದಿಂದ ನಮಗೆ ಮೀಸಲಾತಿ ಸಿಗಲಿದೆ ಎಂದರು.

ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ತೆಗ್ಗಿನ ಮಠದ ಕಾರ್ಯದರ್ಶಿ ಡಾ. ಟಿ.ಎಂ.ಚಂದ್ರಶೇಖರಯ್ಯ, ಮಹಾಸಭಾದ ತಾಲ್ಲೂಕು ಅಧ್ಯಕ್ಷ ಎಂ. ರಾಜಶೇಖರ, ಜಿಲ್ಲಾ ಉಪಾಧ್ಯಕ್ಷ ಇಟಗಿ ಸಂಗನಬಸಪ್ಪ ಮಾತನಾಡಿದರು.

ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಸಿ.ಎಂ. ಕೊಟ್ರಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ವೀರಶೈವ ಲಿಂಗಾಯತ ಮಹಾಸಭಾ ಯುವ ಘಟಕದ ರಚನಾ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಕಲ್ಮಠ್ ಸ್ವಾಗತಿಸಿದರು.

ಗೌರವ ಸನ್ಮಾನ ಕಾರ್ಯಕ್ರಮದಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ತೆಗ್ಗಿನ ಮಠದ ಕಾರ್ಯದರ್ಶಿ ಡಾ. ಟಿ.ಎಂ. ಚಂದ್ರಶೇಖರಯ್ಯ, ಪಿಎಲ್‌ಡಿ ಬ್ಯಾಂಕ್ ನೂತನ ಉಪಾಧ್ಯಕ್ಷ, ಪುರಸಭೆ ಸದಸ್ಯ ಗೊಂಗಡಿ ನಾಗರಾಜ, ಪುರಸಭೆ ನಾಮ ನಿರ್ದೇಶನ ಸದಸ್ಯೆ ಸುಮಾ ವೈ. ಎಂ., ಪಿಎಲ್‌ಡಿ ಬ್ಯಾಂಕ್ (2ನೇ ಪುಟಕ್ಕೆ)

# ಕುಂಭಮೇಳ : ವಿಶೇಷ ಎಕ್ಸ್‌ಪ್ರೆಸ್ ರೈಲು

ಮೈಸೂರು, ಫೆ. 13- ಕುಂಭಮೇಳದ ಸಮಯದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆ ನಿವಾರಿಸಲು ಮೈಸೂರು ಮತ್ತು ಉತ್ತರ ಪ್ರದೇಶದ ತುಂಡ್ಲಾ ನಿಲ್ದಾಣಗಳ ನಡುವೆ ಒಂದು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲುಗಳನ್ನು ಓಡಿಸಲು ರೈಲ್ವೆ ಮಂಡಳಿ ಅನುಮೋದನೆ ನೀಡಿದೆ.



ರೈಲು ಸಂಖ್ಯೆ 06217 ಮೈಸೂರು - ತುಂಡ್ಲಾ ವಿಶೇಷ ಎಕ್ಸ್‌ಪ್ರೆಸ್ ರೈಲು ಇದೇ ದಿನಾಂಕ 17 ರಂದು (ಸೋಮವಾರ) ಮೈಸೂರಿನಿಂದ ರಾತ್ರಿ 9:40 ಕ್ಕೆ ಹೊರಟು, ಫೆಬ್ರವರಿ 20, 2025 ರಂದು ಬೆಳಿಗ್ಗೆ 9:30 ಗಂಟೆಗೆ ಉತ್ತರ ಪ್ರದೇಶದ ತುಂಡ್ಲಾ ನಿಲ್ದಾಣ ತಲುಪಲಿದೆ.

ಪುನಃ ಇದೇ ರೈಲು (06218) ದಿನಾಂಕ 21 ರಂದು ತುಂಡ್ಲಾ ನಿಲ್ದಾಣದಿಂದ ಬೆಳಿಗ್ಗೆ 11:30 ಗಂಟೆಗೆ ಹೊರಟು, ಭಾನುವಾರ (ದಿನಾಂಕ 23, 2025) ರಾತ್ರಿ 10 ಗಂಟೆಗೆ ಮೈಸೂರು ನಿಲ್ದಾಣಕ್ಕೆ ಆಗಮಿಸಲಿದೆ.

ಈ ರೈಲು ಎರಡೂ ಮಾರ್ಗಗಳಲ್ಲಿ ಮಂಡ್ಯ, ರಾಮನಗರ, ಕೆಂಗೇರಿ, ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ತುಮಕೂರು, ಅರಸೀಕೆರೆ, ಕಡೂರು, ಚಿಕ್ಕಜಾಜೂರು, ದಾವಣಗೆರೆ, ಹರಿಹರ, ರಾಣೆಬೆನ್ನೂರು, ಹಾವೇರಿ, ಎಸ್‌ಎಸ್‌ಎಸ್ ಹುಬ್ಬಳ್ಳಿ, ಧಾರವಾಡ, ಅಳ್ನಾವರ, ಲೋಂಡಾ, ಖಾನಾಪುರ, ಬೆಳಗಾವಿ, ಗೋಕಾಕ್ ರೋಡ್, ಘಟಪ್ರಭಾ, ರಾಯಬಾಗ, ಕುಡಚಿ, ಮೀರಜ್, ಪುಣೆ, ದೌಂಡ್ ಕಾರ್ಡ್ ಲೈನ್, ಮನ್ಮಾಡ್, ಭೂಸಾವಲ್, ಇಟಾರ್ಸಿ, ಪಿಪಾರಿಯಾ, ನರಸಿಂಗ್ಪುರ, ಜಬಲ್ಪುರ್, ಕಟ್ನಿ, ಮೈಹಾರ್, ಸತ್ನಾ, ಮಾಣಿಕ್ಪುರ್, ಪ್ರಯಾಗರಾಜ್, ಫತೇಪುರ್, ಗೋವಿಂದಪುರಿ, ಇಟಾವಾ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ.

**ಏಕಮಾರ್ಗ ವಿಶೇಷ ರೈಲು :** ಕುಂಭಮೇಳದ ಸಂದರ್ಭದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ಸರಿದೂಗಿಸಲು ಮೈಸೂರಿನಿಂದ ಲಕ್ನೋಗೆ ಏಕಮಾರ್ಗ ವಿಶೇಷ ಎಕ್ಸ್‌ಪ್ರೆಸ್ ರೈಲು (06221) ಓಡಿಸಲು ರೈಲ್ವೆ ಮಂಡಳಿ ಅನುಮೋದನೆ ನೀಡಿದೆ.

ಮೈಸೂರು-ಲಕ್ನೋ ಏಕಮಾರ್ಗ ವಿಶೇಷ ರೈಲು (06221) ಶುಕ್ರವಾರ (ಫೆ.14, 2025) ಬೆಳಿಗ್ಗೆ 7:30 ಗಂಟೆಗೆ ಮೈಸೂರಿನಿಂದ ಹೊರಟು, ಭಾನುವಾರದಂದು ( ಫೆ.16, 2025) ಸಂಜೆ 4:00 ಗಂಟೆಗೆ ಲಕ್ನೋ ನಿಲ್ದಾಣವನ್ನು ತಲುಪಲಿದೆ.

ಈ ರೈಲಿನಲ್ಲಿ 1 ಎಸಿ ತ್ರಿ ಟೈರ್, 8 ಸ್ಲೀಪರ್ ಕ್ಲಾಸ್, 10 ಸಾಮಾನ್ಯ ದ್ವಿತೀಯ ದರ್ಜೆ ಮತ್ತು 2 ಎಸ್‌ಎಲ್‌ಆರ್/ಡಿ ಬೋಗಿಗಳು ಇರಲಿವೆ. ಈ ರೈಲು ಮಂಡ್ಯ, ಕೆಂಗೇರಿ, ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ತುಮಕೂರು, ಅರಸೀಕೆರೆ, ಕಡೂರು, ಚಿಕ್ಕಜಾಜೂರು, ದಾವಣಗೆರೆ, ಹರಿಹರ, ರಾಣೆಬೆನ್ನೂರು, ಹಾವೇರಿ, ಹುಬ್ಬಳ್ಳಿ, ಧಾರವಾಡ, ಲೋಂಡಾ, ಖಾನಾಪುರ, ಬೆಳಗಾವಿ, ಗೋಕಾಕ್ ರೋಡ್, ಘಟಪ್ರಭಾ, ರಾಯಬಾಗ, ಕುಡಚಿ, ಮೀರಜ್, ಸಾಂಗ್ಲಿ, ಕರಾಡ್, ಪುಣೆ, ದೌಂಡ್ ಕಾರ್ಡ್ ಲೈನ್, ಮನ್ಮಾಡ್, ಭೂಸಾವಲ್, ಇಟಾರ್ಸಿ, ಕಟ್ನಿ, ಸತ್ನಾ, ಮಾಣಿಕ್ಪುರ್, ಪ್ರಯಾಗರಾಜ್ ಚಿಯೋಕಿ ಮತ್ತು ವಾರಾಣಸಿ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ.

ಈ ರೈಲಿನ ಪ್ರತಿ ನಿಲ್ದಾಣದ ವೇಳಾಪಟ್ಟಿ ಮತ್ತು ಟಿಕೆಟ್ ಬುಕಿಂಗ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ, ಪ್ರಯಾಣಿಕರು ಅಧಿಕೃತ ಭಾರತೀಯ ರೈಲ್ವೆ ಜಾಲತಾಣಕ್ಕೆ ಭೇಟಿ ನೀಡಿ ಅಥವಾ ಸಹಾಯವಾಣಿ ಸಂಖ್ಯೆ 139 ಗೆ ಕರೆ ಮಾಡುವ ಮೂಲಕ ಮಾಹಿತಿ ಪಡೆದುಕೊಳ್ಳಬಹುದು ಎಂದು ಹುಬ್ಬಳ್ಳಿಯ ನೈಋತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ. ಮಂಜುನಾಥ್ ಕನಮಡಿ ತಿಳಿಸಿದ್ದಾರೆ.

# ಜಾಗತಿಕ ಆರ್ಥಿಕ ಶಕ್ತಿಯಾಗಿ ಭಾರತಕ್ಕೆ 3ನೇ ಸ್ಥಾನ



ಶಿವಮೊಗ್ಗ, ಫೆ. 13- ಜಾಗತಿಕವಾಗಿ ಆರ್ಥಿಕ ಶಕ್ತಿಯಾಗಿ ಭಾರತ 3ನೇ ಸ್ಥಾನಕ್ಕೆ ಬರಲು ಹಣಕಾಸು ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ ಎಂದು ಲೋಕ ಸಭಾ ಸದಸ್ಯ ಬಿ.ವೈ.ರಾಘವೇಂದ್ರ ಹೇಳಿದರು.

ಇಲ್ಲಿನ ಸಹ್ಯಾದ್ರಿ ಚಿಟ್ಸ್‌ನ ನೂತನ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಭಾರತವು ಮೂರನೇ ಆರ್ಥಿಕ ಶಕ್ತಿಯಾಗಿ ಬೆಳೆಯಲು ಪ್ರಧಾನ ಮಂತ್ರಿ ಮೋದಿಯವರು ಮಾಡುತ್ತಿರುವ ಪ್ರಯತ್ನಕ್ಕೆ ಚಿಕ್ಕ ಚಿಕ್ಕ ಹಣಕಾಸು ಸಂಸ್ಥೆಗಳು ಬಹು ಮುಖ್ಯಪಾತ್ರ ವಹಿಸುತ್ತವೆ ಎಂದು ತಿಳಿಸಿದರು.

ಶಾಸಕ ಎಸ್.ಎನ್. ಚನ್ನಬಸಪ್ಪ, ಸಿನಿಮಾ ನಟ ದಿಗಂತ್, ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ರಮೇಶ್ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆಯ ಚೇರ್ಮನ್ ಬದ್ರಿನಾಥ್ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ ಬಿ.ಗೋಪಿನಾಥ್, ಕಾಂಗ್ರೆಸ್ ಮುಖಂಡ ಎಚ್.ಸಿ. ಯೋಗೀಶ್, ಉದ್ಯಮಿ ಅಶ್ವತ್ಥ್ ನಾರಾಯಣ ಶೆಟ್ಟಿ, ಸಂಸ್ಥೆಯ ಮೂಲ ಸಂಸ್ಥಾಪಕ ಡಿ.ಎಲ್.ನಟರಾಜ್, ಮಾರ್ಕೆಟಿಂಗ್ ಡೈರೆಕ್ಟರ್ ಶಿವರಾಜ್ ಉಡುಗಣಿ, ಟಿ.ಎಸ್. ಬದರೀನಾಥ್, ರಮೇಶ್ ಎಂ.ಭಟ್ ಮತ್ತು ಇತರರು ಹಾಜರಿದ್ದರು. ಸಂಸ್ಥೆ ನಿರ್ದೇಶಕ ಜಿ.ವಿಜಯಕುಮಾರ್ ಸ್ವಾಗತಿಸಿದರು. ರವೀಂದ್ರನಾಥ್ ಐತಾಳ್ ವಂದಿಸಿದರು.

# ಕುಟುಂಬಗಳೇ ಜೀತಕ್ಕೆ

**(3ನೇ ಪುಟದಿಂದ)** ಜಿಲ್ಲಾ ಮಟ್ಟದ ಅಧಿಕಾರಿಗಳನ್ನೊಳಗೊಂಡ ಸಮಿತಿ ರಚಿಸಲಾಗಿದೆ. ಈ ಸಮಿತಿಯು ಜೀತ ಪದ್ಧತಿ ಕುರಿತು ಬರುವ ದೂರುಗಳನ್ನು ಪರಿಶೀಲಿಸಿ ಅಗತ್ಯ ಕ್ರಮವನ್ನು ತೆಗೆದುಕೊಂಡು ಜಿಲ್ಲೆಯಲ್ಲಿ ಜೀತ ಪದ್ದತಿ ಸಂಪೂರ್ಣ ನಿರ್ಮೂಲನೆಗೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್ ಅರುಣಕುಮಾರ್, ಹೆಚ್ಚುವರಿ ರಕ್ಷಣಾಧಿಕಾರಿ ಮಂಜುನಾಥ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣನಾಯ್ಕ, ಉಪವಿಭಾಗಾಧಿಕಾರಿ ಸಂತೋಷ್ ಪಾಟೀಲ್, ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಮಲ್ಲನಾಯ್ಕ ಬಿ, ಯೋಜನಾ ನಿರ್ದೇಶಕರಾದ ರೇಷ್ಮ ಕೌಸರ್, ಮುಕ್ತಿ ಅಲೈಯನ್ಸ್ ಸಂಚಾಲಕಿ ಕ್ರಿಸ್ಟೋಫರ್ ಸ್ವ್ಯಾನಿ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸಿದ್ದರು.

# ಬಡ್ಡಿ ವಸೂಲಿಗೆ ದಂಡ

**(3ನೇ ಪುಟದಿಂದ)** ಜಾಮೀನುರಹಿತ ಅಪರಾಧ (ಕಾಗ್ನೆಸಿಬಲ್ ಮತ್ತು ನಾನ್‌ಬೇಲೇಬಲ್) ಆಗಿರುತ್ತವೆ, ಯಾವುದೇ ಪೊಲೀಸ್ ಅಧಿಕಾರಿ ಇಂತಹ ಪ್ರಕರಣಗಳ ನೋಂದಣಿಯನ್ನು ನಿರಾಕರಿಸುವಂತಿಲ್ಲ.

ಪೊಲೀಸ್ ಉಪಾಧೀಕ್ಷಕರ ದರ್ಜೆಗೆ ಕಡಿಮೆಯಿಲ್ಲದ ಅಧಿಕಾರಿಯು ಸ್ವಪ್ರೇರಿತ ಪ್ರಕರಣ ದಾಖಲಿಸಬಹುದು.

ಸರ್ಕಾರ ಕಾಲಕಾಲಕ್ಕೆ ಆಧ್ಯಾದೇಶದ ಅನುಷ್ಠಾನಕ್ಕಾಗಿ ನಿರ್ದೇಶನಗಳನ್ನು ನೀಡುವ ಅಧಿಕಾರ ಹೊಂದಿರುತ್ತದೆ.

ಈ ಆಧ್ಯಾದೇಶದಿಂದ ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನೋಂದಾಯಿತವಲ್ಲದ ಮೈಕ್ರೋ ಫೈನಾನ್ಸ್ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತು ಹೆಚ್ಚುತ್ತದೆ ಮತ್ತು ಸಾಲಗಾರರಿಗೆ ಕಿರುಕುಳ, ಬಲವಂತದ ವಸೂಲಿ ಕ್ರಮಗಳಿಂದ ಮುಕ್ತಿ ದೊರೆಯುತ್ತದೆ ಎಂಬುದು ಸರ್ಕಾರದ ವಿಶ್ವಾಸವಾಗಿದೆ.




# ಅನೇಕ ಸವಾಲು ಎದುರಿಸುತ್ತಿರುವ ಮುದ್ರಣ ಮಾಧ್ಯಮ

## 2024ರ ವರ್ಷದ ವ್ಯಕ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ ಕಳವಳ

ದಾವಣಗೆರೆ, ಫೆ.13- ಪ್ರಸ್ತುತ ದಿನಮಾನಗಳಲ್ಲಿ ಹೊಸ-ಹೊಸ ತಾಂತ್ರಿಕ ಆವಿಷ್ಕಾರಗಳ ನಡುವೆ ಮುದ್ರಣ ಮಾಧ್ಯಮ ಅನೇಕ ಸವಾಲುಗಳನ್ನು ಎದುರಿಸುತ್ತಿದೆ ಎಂದು ಕನ್ನಡ ಪ್ರಾಧ್ಯಾಪಕ ಹಾಗೂ ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಕಳವಳ ವ್ಯಕ್ತಪಡಿಸಿದರು.

ಜಿಲ್ಲೆ ಸಮಾಚಾರ ಬಳಗದ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಗುರುವಾರ ಸಂಜೆ ಹಮ್ಮಿಕೊಂಡಿದ್ದ 2024ರ ವರ್ಷದ ವ್ಯಕ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸ್ಮಾರ್ಟ್ ಫೋನ್ ಈ ಶತಮಾನದ ಬಹುದೊಡ್ಡ ಆವಿಷ್ಕಾರ ಆಗಿದೆ. ಇಡಿ ಪ್ರಪಂಚದ ವಿದ್ಯಮಾನವನ್ನು ಅಂಗೈಯಲ್ಲಿ ನೋಡಲು ಅನುಕೂಲ ಮಾಡುತ್ತಿದೆ. ಇಂತಹ ವ್ಯವಸ್ಥೆಯ ನಡುವೆ ದಿನಪತ್ರಿಕೆಗಳನ್ನು ನಡೆಸುವುದು ಬಹು ಕಷ್ಟಕರ ಎಂದರು.

ತಂತ್ರಜ್ಞಾನದ ವೇಗದಿಂದಾಗಿ ಪತ್ರಿಕಾ ಮಾಧ್ಯಮ ಮತ್ತು ಪುಸ್ತಕ ಸಂಸ್ಕೃತಿ ಆತಂಕವನ್ನು ಎದುರಿಸುತ್ತಿದೆ. ಇದರ ನಡುವೆಯೇ 18 ವರ್ಷಗಳಿಂದ ಜಿಲ್ಲಾ ಸಮಾಚಾರ ಪತ್ರಿಕಾ ಬಳಗ ವಿಶೇಷ ಸಾಧಕರನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಉತ್ತಮ ಕಾರ್ಯ ಎಂದು ಶ್ಲಾಘಿಸಿದರು.

**ಸೋಮೇಶ್ವರದ ಕೆ.ಎಂ ಸುರೇಶ್ ಅವರಿಗೆ '2024ರ ವರ್ಷದ ವ್ಯಕ್ತಿ' ಪ್ರಶಸ್ತಿ ಪ್ರದಾನ**

ಸುದ್ದಿ ಕೊಡುವ ಅವಸರಕ್ಕೆ ಬಿದ್ದ ಮಾಧ್ಯಮಗಳು ಅಪಘಾತ, ಕಲಹ ಮತ್ತು ಹೊಡೆದಾಟದಂತಹ ಸುದ್ದಿಗಷ್ಟೇ ಜೋತು ಬೀಳದೇ ಪ್ರಕೃತಿಪರ, ಮನುಷ್ಯಪರ ಹಾಗೂ ನಗರಪರವಾಗಿರುವ ಒಳ್ಳೆಯ ವಿಚಾರಗಳನ್ನು ಸುದ್ದಿಯ ರೂಪದಲ್ಲಿ ಸಮಾಜಕ್ಕೆ ಉತ್ತಮ ಸಂದೇಶ ನೀಡಬೇಕು ಸಲಹೆ ನೀಡಿದರು.

ಉತ್ತಮ ಸಂಸ್ಕಾರ, ವಿಶ್ವಾಸ, ಪ್ರೀತಿ, ಪ್ರಾಮಾಣಿಕತೆಯನ್ನು ಆಂತರಿಕವಾಗಿ ಗಳಿಸಬೇಕು. ಬಾಹ್ಯವಾಗಿ ಆಸ್ತಿ, ಸಂಪತ್ತು, ಶ್ರೀಮಂತಿಕೆಯನ್ನು ಗಳಿಸಬೇಕು. ಇದರಲ್ಲಿ ಬಾಹ್ಯವಾಗಿ ಗಳಿಸಿದ್ದನ್ನು ಆಂತರಿಕವಾಗಿ ತೆಗೆದುಕೊಂಡರೆ ಮನುಷ್ಯ ಹಾಳಾಗುತ್ತಾನೆ ಎಂದು ಎಚ್ಚರಿಕೆಯ ಮಾತುಗಳನ್ನಾಡಿದರು.

ಮನುಷ್ಯನಿಗೆ ಸೋಲು, ಬಡತನ ಹಾಗೂ ಅವಮಾನ ಗೊತ್ತಿದ್ದರೆ, ಅವನಲ್ಲಿ ಮಾನವೀಯ ಗುಣಗಳು ತುಂಬಿಕೊಂಡು ಸಾಧಕನಾಗುತ್ತಾನೆ. ಸಾಧಕರಾದ ಬಳಿಕ ಭೂತಕಾಲ ಮರೆಯಬಾರದು. ಸಾಧನೆಯ ಹಮ್ಮಿನಲ್ಲಿ ಮೆರೆಯಬಾರದು ಎಂದು ಕಿವಿಮಾತು ಹೇಳಿದರು.

ಮಕ್ಕಳಿಗೆ ಧೈರ್ಯವಾಗಿ ಬದುಕಬೇಕು ಎಂಬುದನ್ನು ಕಲಿಸುತ್ತಿದ್ದರಿಂದಲೇ ಅವರಲ್ಲಿ ಸೂಕ್ಷ್ಮತೆ ಮರೀಚಿಕೆ ಯಾಗುತ್ತಿದೆ. ಸಾರ್ವಜನಿಕ ಬದುಕಿನಲ್ಲಿ ಸಂಕೋಚ ಮತ್ತು ಲಜ್ಜೆ ಬಹಳ ಮುಖ್ಯ ಎಂದರು. ಯಾರ ಬಗ್ಗೆಯೂ ಪರೋಕ್ಷವಾಗಿ ಕೆಟ್ಟದಾಗಿ ಮತ್ತು ಲಘುವಾಗಿ ಮಾತನಾಡ ಬಾರದು. ಸಮಾಜಕ್ಕೆ ಉತ್ತಮ ಸೇವೆ ನೀಡಬೇಕು.

ಇದೇ ವೇಳೆ ಸೋಮೇಶ್ವರ ಸಮೂಹ ಸಂಸ್ಥೆಯ ಸಂಸ್ಥಾಪಕ ಕೆ.ಎಂ ಸುರೇಶ್ ಅವರಿಗೆ '2024ರ ವರ್ಷದ ವ್ಯಕ್ತಿ' ಪ್ರಶಸ್ತಿ ನೀಡಿ ಗೌರವಿಸಿದರು.

ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅವರು, ವರ್ಷದ ವ್ಯಕ್ತಿ ವಿಶೇಷ ಸಂಚಿಕೆ ಬಿಡುಗಡೆಗೊಳಿಸಿದರು. ಹಿರಿಯ ಪತ್ರಕರ್ತ ವಿ. ಹನುಮಂತಪ್ಪ ಪ್ರಾಸ್ತಾವಿಕ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಿದ್ಧಗಂಗಾ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಜಸ್ಟಿನ್ ಡಿಸೌಜ, ಬಿಜೆಪಿ ಮುಖಂಡ ಲೋಕಿಕೆರೆ ನಾಗರಾಜ್, ಹಿರಿಯ ವಕೀಲ ರಾಮಚಂದ್ರ ಕಲಾಲ್, ಸಿ.ಕೆ.ಆನಂದ ತೀರ್ಥಾಚಾರ್, ಸಾಲಿಗ್ರಾಮ ಗಣೇಶ್ ಶೆಣೈ, ಶ್ರೀಮತಿ ಹೆಚ್.ಕೆ. ಸತ್ಯಭಾಮ ಮಂಜುನಾಥ್, ಮಹಾಂತೇಶ್ ವಿ. ಒಣರೊಟ್ಟಿ, ಕೆ. ರಾಘವೇಂದ್ರ ನಾಯರಿ ಇತರರು ಇದ್ದರು.

# ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಹೇರಿಕೆ

ನವದೆಹಲಿ, ಫೆ. 13 - ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಹೇರಿಕೆ ಮಾಡಲಾಗಿದ್ದು, ವಿಧಾನಸಭೆಯನ್ನು ಅಮಾನತ್ತಿನಲ್ಲಿ ಇರಿಸಲಾಗಿದೆ. ಬೀರೇನ್ ಸಿಂಗ್ ಅವರು ರಾಜೀನಾಮೆ ನೀಡಿದ ಕೆಲವೇ ದಿನಗಳ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ. ಮಣಿಪುರ ವಿಧಾನಸಭೆ ಅವಧಿ 2027ರವರೆಗೆ ಇದೆ. ಸದನವನ್ನು ಅಮಾನತ್ತಿನಲ್ಲಿ ಇರಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

# ಯಲ್ಲಮ್ಮ ದೇವಸ್ಥಾನದಲ್ಲಿ ಹುಣ್ಣಿಮೆ ಜಾತ್ರೆ



ದಾವಣಗೆರೆ, ಫೆ. 13 - ಇಲ್ಲಿನ ವಿನೋಬನಗರ 4 ಮೇನ್, 4 ಕ್ರಾಸ್ ನಲ್ಲಿರುವ ಶ್ರೀ ರೇಣುಕಾ ಎಲ್ಲಮ್ಮದೇವಿ ದೇವಸ್ಥಾನದಲ್ಲಿ 25ನೇ ವರ್ಷದ ಭರತ ಹುಣ್ಣಿಮೆ ಜಾತ್ರಾ ಮಹೋತ್ಸವವು ಅದ್ದೂರಿಯಾಗಿ ನಡೆಯಿತು.

# ಚೀನಾ ಸೈಬರ್ ಅಪರಾಧಿಗಳಿಗೆ ಬ್ಯಾಂಕ್ ಖಾತೆ

**(3ನೇ ಪುಟದಿಂದ)** ವಂಚನೆಯಲ್ಲಿ ಚೀನಾ ತಂಡ ತೊಡಗಿತ್ತು. 21 ರಾಜ್ಯಗಳಲ್ಲಿ ಈ ವಂಚನೆ ನಡೆದಿತ್ತು ಎಂದು ತಿಳಿಸಲಾಗಿದೆ. ನಿರ್ದಿಷ್ಟ ಸುಳಿವಿನ ಆಧಾರದ ಮೇಲೆ ಸೈಬರ್ ಅಪರಾಧ ದಳ ಕೆಲ ದಿನಗಳ ಹಿಂದೆ ದಾಳಿ ನಡೆಸಿ 9 ಜನರನ್ನು ಬಂಧಿಸಿದೆ. ಇವರೆಲ್ಲರೂ ರಾಜಸ್ಥಾನದವ ರಾಗಿದ್ದಾರೆ. ಇವರಿಂದ 12 ಮೊಬೈಲ್ ಫೋನ್, 43 ಎಟಿಎಂ ಕಾರ್ಡ್, 15 ಸಿಮ್ ಕಾರ್ಡ್ ಹಾಗೂ 21 ಚೆಕ್ ಬುಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ರಾಜಸ್ಥಾನದ ಸುನಿಲ್ ಧಿರಾನಿ ಎಂಬಾತನ ಸೂಚನೆಯ ಮೇರೆಗೆ ಈ ತಂಡ ಅಹಮದಾಬಾದ್ ನಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಧಿರಾನಿಯು ಈ ಸಂಚಿನ ರೂವಾರಿಯಾಗಿದ್ದ. ಆತ ಸಹಚರ ಲಲಿತ್ ಬಿಷ್ಣೋಯಿ ಜೊತೆ ಸೇರಿ ಕಾರ್ಯನಿರ್ವಹಿಸುತ್ತಿದ್ದ.

ಪೊಲೀಸರ ತಂಡ ರಾಜಸ್ಥಾನದ ಜೋಧಪುರಕ್ಕೆ ತೆರಳಿ ಧಿರಾನಿ ಬಂಧನಕ್ಕೆ ಪ್ರಯತ್ನ ನಡೆಸಿತ್ತು. ಆದರೆ ಆತ ತಪ್ಪಿಸಿಕೊಂಡಿದ್ದಾನೆ. ಆತನ ಜೊತೆ ಕಾರ್ಯನಿರ್ವಹಿಸುತ್ತಿದ್ದ ಲಲಿತ್ ಬಿಷ್ಣೋಯಿ ಹಾಗೂ ಕುಲ್ದೀಪ್ ಕಿಚರ್ ಎಂಬುವವರನ್ನು ಬಂಧಿಸಲಾಗಿದೆ.

# ರಾಜ್ಯಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಮೆಂಟ್

ದಾವಣಗೆರೆ, ಫೆ. 13- ನೇಕಾರ ಸಮಾಜ ಒಗ್ಗಟ್ಟಿನಲ್ಲಿ ಕೊರತೆ ಕಾಣಿಸುತ್ತಿದ್ದು, ಮುಂದಿನ ದಿನಗಳಲ್ಲಿ ರಾಜಕೀಯದಲ್ಲಿ ಮುಂದೆ ಬಂದು ಒಗ್ಗಟ್ಟನ್ನು ನಾವು ತೋರಿಸಬೇಕು. ಹಾಗೂ ಈಗ ನಡೆಯುತ್ತಿರುವ ಇಂತಹ ಕ್ರೀಡೆಗಳಿಗೆ ಪ್ರೋತ್ಸಾಹಿಸಬೇಕು ಎಂದು ಪದ್ಮಶಾಲಿ ಸಮಾಜದ ಅಧ್ಯಕ್ಷ ಎಸ್‌ಟಿಪಿ ತಿಪ್ಪೇಸ್ವಾಮಿ ತಿಳಿಸಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಮೊನ್ನೆ ಏರ್ಪಾಡಾಗಿದ್ದ ರಾಜ್ಯಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಮೆಂಟ್ -ನೇಕಾರ ಕಪ್ 2025 ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಮುಂದಿನ ದಿನಗಳಲ್ಲಿ ನೇಕಾರ ಸಮಾಜದ ಬಂಧುಗಳು ಸೇರಿ ಸಭೆ ಸೇರಿ ನೇಕಾರ ಸಮಾಜದ ಕಟ್ಟಡ ನಿರ್ಮಿಸುವಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಪ್ಪೇಸ್ವಾಮಿ ತಿಳಿಸಿದರು.



**ನೇಕಾರ ಸಮಾಜದ ಕಟ್ಟಡ ನಿರ್ಮಾಣಕ್ಕೆ ಕ್ರಮ**

**- ಎಸ್.ಟಿ.ಪಿ. ತಿಪ್ಪೇಶ್, ಅಧ್ಯಕ್ಷರು, ಪದ್ಮಸಾಲಿ ಸಮಾಜ**

**ನೇಕಾರ ಕಪ್ 2025**

ಕುರುಹಿನ ಶೆಟ್ಟಿ ಸಮಾಜದ ಅಧ್ಯಕ್ಷ ಆರ್. ಹೆಚ್. ನಾಗಭೂಷಣ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಡಾ. ಈಶ್ವರಾನಂದ ಸ್ವಾಮೀಜಿ, ಪ್ರೊ. ಎಲ್. ಸತ್ಯನಾರಾಯಣ, ಧರ್ಮರಾಜ ಏಕಬೋಟೆ, ಜೆ.ಎನ್. ಶ್ರೀನಿವಾಸ, ಎನ್.ವಿ. ರುದ್ರಮುನಿ, ಡಿ.ಸಿ. ಶ್ರೀನಿವಾಸ ಚಿನ್ನಿಕಟ್ಟೆ, ಲತಾ ಎನ್. ರಾಮಚಂದ್ರಪ್ಪ ಕೆ.ಜಿ., ನಾಗರಾಜ್ ಎಸ್. ಬಡದಾಳ್, ಶ್ರೀಕಾಂತ್ ಕಾಕಿ ಮತ್ತು ಹೆಚ್. ಎಸ್. ಸುಧೀರ್ ಉಪಸ್ಥಿತರಿದ್ದರು.

ನೇಕಾರ ಕಪ್ 2025ರ ಪ್ರಥಮ ಬಹುಮಾನವನ್ನು ದಾವಣಗೆರೆಯ ನೇಕಾರ ಲೆವೆನ್ ತಂಡ, ದ್ವಿತೀಯ ಬಹುಮಾನವನ್ನು ಇಳಕಲ್‌ನ ಸನ್ ಆಫ್ ನೇಕಾರ ಹಾಗೂ ತೃತೀಯ ಬಹುಮಾನವನ್ನು ಮನು 11 ದೊಡ್ಡಬಳ್ಳಾಪುರ, ಕೋನಮನಹಳ್ಳಿ ಚಿತ್ರದುರ್ಗ ಜಿಲ್ಲೆ ಇವರು ಪಡೆದುಕೊಂಡಿರುತ್ತಾರೆ. ನಗರದ ಕುರುಹಿನಶೆಟ್ಟಿ (ನೇಕಾರ) ಸಮಾಜದವರು ಪ್ರಥಮ ಬಹುಮಾನದ ದಾನಿಗಳಾಗಿದ್ದಾರೆ.

ಇದೇ ಸಂದರ್ಭದಲ್ಲಿ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್ (ಬೆಂಗಳೂರು) ಉಮಾದೇವಿ ರೇವಣ್ಣ, ಹಾಗೂ ಜೆ.ಹೆಚ್. ಪಟೇಲ್ ಕಾಲೇಜಿನ ಕಾರ್ಯದರ್ಶಿ ಮುಸ್ತಾಫ್ ಅವರುಗಳಿಗೆ ಸನ್ಮಾನಿಸಿ, ಗೌರವಿಸಲಾಯಿತು.

# ಅಮೆರಿಕ ಸರ್ಕಾರದ ಸಂಪೂರ್ಣ ಏಜೆನ್ಸಿಗಳು 'ಡಿಲೀಟ್'

**(3ನೇ ಪುಟದಿಂದ)** ಮಸ್ಕ್, ನಾವೀಗ ಪ್ರಜಾಪ್ರಭುತ್ವದ ಬದಲು ಅಧಿಕಾರಶಾಹಿ ಆಡಳಿತದಲ್ಲಿದ್ದೇವೆ ಎಂದು ಹೇಳಿದರು.

ನಾವೀಗ ಇಡೀ ಏಜೆನ್ಸಿಗಳನ್ನೇ 'ಡಿಲೀಟ್' ಮಾಡಬೇಕಿದೆ. ನಾವು ಕಳೆಗಳನ್ನು ಬೇರು ಸಮೇತ ಕಿತ್ತು ಹಾಕದೆ ಹೋದರೆ ಮತ್ತೆ ಕಳೆ ಬೆಳೆಯುವುದು ಸುಲಭವಾಗುತ್ತದೆ ಎಂದವರು ಹೇಳಿದರು. ಎಲಾನ್ ಮಸ್ಕ್ ಅವರು ಅಮೆರಿಕದ ದಕ್ಷತಾ ಇಲಾಖೆಯ ನೇತೃತ್ವ ವಹಿಸಿದ್ದಾರೆ. ಈ ಮೂಲಕ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದಲ್ಲಿ ಅವರು ಅಪಾರ ಪ್ರಭಾವ ಹೊಂದಿದ್ದಾರೆ. ಹಲವಾರು ಹಿರಿಯ ಅಧಿಕಾರಿಗಳನ್ನು ಮೂಲೆಗುಂಪು ಮಾಡುವ ಹಾಗೂ ಸೂಕ್ಷ್ಮ ಮಾಹಿತಿಯನ್ನು ಪಡೆಯುವ ಅಧಿಕಾರ ಮಸ್ಕ್‌ಗೆ ದೊರೆತಿದೆ.

ಯುಎಸ್ ಏಡ್ ಈ ರೀತಿಯ ಕ್ರಮಕ್ಕೆ ಒಂದು ಉದಾಹರಣೆಯಾಗಿದೆ. ಅಲ್ಲದೆ ಪ್ರಜಾಪ್ರಭುತ್ವಕ್ಕಾಗಿ ರಾಷ್ಟ್ರೀಯ ದತ್ತಿ ನಿಧಿ ಎಂಬ ಸಂಸ್ಥೆಯೂ ಇದೆ. ಈ ಸಂಸ್ಥೆಯ ಕಾರಣದಿಂದಾಗಿ ಇತ್ತೀಚೆಗೆ ನಾವು ಎಷ್ಟು ಪ್ರಜಾಪ್ರಭುತ್ವ ಪಡೆದಿದ್ದೇವೆ? ಎಂಬ ಪ್ರಶ್ನೆ ಮುಂದಿಡಲು ಬಯಸುತ್ತೇನೆ ಎಂದು ಮಸ್ಕ್ ಹೇಳಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರು ಬೇರೆ ದೇಶಗಳ ವ್ಯವಹಾರಗಳಲ್ಲಿ ಹೆಚ್ಚು ಆಸಕ್ತಿ ಹೊಂದಿಲ್ಲ. ಕೆಲವು ಸಮಯದಲ್ಲಿ ಅಮೆರಿಕ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಮೂಗು ತೂರಿಸುತ್ತಿದೆ ಎಂದು ಮಸ್ಕ್ ಹೇಳಿದರು.

# ನಿವೇಶನ ಅಕ್ರಮ ಹಂಚಿಕೆ; ಕೋಟ್ಯಂತರ ರೂ. ನಷ್ಟ

**(3ನೇ ಪುಟದಿಂದ)** ಬಿಡಿ ನಿವೇಶನ ಹಂಚಿಕೆ ಸಂದರ್ಭದಲ್ಲಿ ಕಾನೂನಿನ ಎಲ್ಲೆ ಮೀರಿರುವುದು ದಾಖಲೆಗಳಿಂದ ಕಂಡುಬಂದಿದೆ, ಇದರಲ್ಲಿ ಮೇಲಿನಿಂದ ಕೆಳಹಂತದ ಅಧಿಕಾರಿಗಳವರೆಗೂ ಶಾಮೀಲಾಗಿದ್ದಾರೆ.

ನಿವೇಶನಗಳ ಹಂಚಿಕೆಯಲ್ಲಿ ಕಂದಾಯ ಹಾಗೂ ನೋಂದಣಿ ಅಧಿಕಾರಿಗಳು ಕೆಲವೊಂದು ವಿಷಯಗಳಲ್ಲಿ ಶಾಮೀಲಾಗಿರುವುದು ತನಿಖೆಯಿಂದ ಕಂಡುಬಂದಿದೆ ಎಂದು ಉದೇಶ್ ತಮ್ಮ ವರದಿಯಲ್ಲಿ ತಿಳಿಸಿದ್ದಾರೆ.

ಬಿಡಿ ನಿವೇಶನಗಳ ಹಂಚಿಕೆ ಹಾಗೂ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ.)ದ ಪ್ರಾಥಮಿಕ ವರದಿ ಮತ್ತು ಅವರು ಎತ್ತಿರುವ ಪ್ರಶ್ನೆಗಳಿಗೂ ತನಿಖಾಧಿಕಾರಿ ತಮ್ಮ ವರದಿಯಲ್ಲಿ ಉತ್ತರಿಸಿದ್ದಾರೆ.

ಮುಡಾಗೆ ಸಂಬಂಧಿಸಿದ ಲೋಕಾಯುಕ್ತ ತನಿಖಾ ವರದಿಯಲ್ಲಿ ಒಟ್ಟು 550 ಪುಟಗಳಿದ್ದು, 5 ಭಾಗಗಳಾಗಿ ವಿಂಗಡಿಸಲಾಗಿದೆ.

ದೇವರಾಜು ಅವರಿಗೆ ಜಮೀನು ಹೇಗೆ ದೊರೆಯಿತು, ಡಿನೋಟಿಫಿಕೇಷನ್, ಭೂ ಪರಿವರ್ತನೆ, ಮುಖ್ಯಮಂತ್ರಿ ಪತ್ನಿ ಪಾರ್ವತಿ ಅವರ ಜಮೀನು ಸ್ವಾಧೀನ ಹಾಗೂ ಬದಲಿ ನಿವೇಶನ ಹಂಚಿಕೆ ಕುರಿತು ವಿವರಗಳನ್ನು ದಾಖಲೆ ಸಹಿತ ತಿಳಿಸಲಾಗಿದೆ.

ಭೂ ಸ್ವಾಧೀನಕ್ಕೆ ಬದಲಿಗೆ ನೀಡಿದ ನಿವೇಶನಗಳನ್ನು ಹಿಂತಿರುಗಿಸಿದ್ದು, ನಂತರದ ಬೆಳವಣಿಗೆಗಳನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮುಖ್ಯಮಂತ್ರಿ ಕುಟುಂಬದ ಹೆಸರಿನ ಭೂ ದಾಖಲೆಗಳು, 100ಕ್ಕೂ ಹೆಚ್ಚು ಅಧಿಕಾರಿಗಳಿಂದ ಕಲೆ ಹಾಕಿದ ಮಾಹಿತಿ ಹಾಗೂ ನಡೆಸಿದ ವಿಚಾರಣೆ ತನಿಖೆಯಲ್ಲಿ ಒಳಗೊಂಡಿದೆ.

ಅಲ್ಲದೆ, ಮುಡಾದ ಮಾಜಿ ಆಯುಕ್ತರು, ಮಾಜಿ ತಹಶೀಲ್ದಾರ್ ಹಾಗೂ ಅಧಿಕಾರಿಗಳ ಹೇಳಿಕೆ, ಆರೋಪಿಗಳ ಹೇಳಿಕೆ ಕುರಿತು ನಮೂದಿಸಲಾಗಿದೆ.

ಐಜಿಪಿ ಡಾ.ಎ.ಸುಬ್ರಹ್ಮಣ್ಯೇಶ್ವರ ರಾವ್ ಹಾಗೂ ಎಡಿಜಿಪಿ ಮನೀಷ್ ಕರ್ಬಿಕರ್ ಲೋಕಾಯುಕ್ತ ತನಿಖಾ ವರದಿ ಪರಿಶೀಲಿಸುತ್ತಿದ್ದು, ಮುಂದಿನ ಕ್ರಮ ಕುರಿತು ಅಧಿಕಾರಿಗಳು ನೀಡುವ ಅಭಿಪ್ರಾಯ ಪಡೆದು ನ್ಯಾಯಾಲಯಕ್ಕೆ ಒಂದು ವಾರದಲ್ಲಿ ವರದಿ ಸಲ್ಲಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.


# ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಇಂದು ತಮ್ಮ ಏಳನೇ ವರ್ಷದ ವಿವಾಹ ವಾರ್ಷಿಕೋತ್ಸವದ ಸಂಭ್ರಮದಲ್ಲಿರುವ ಡಿ.ಎಸ್.ಎಸ್. ಮುಖಂಡರೂ, ಲಾಸ್ಯ ಫೌಂಡೇಶನ್, ಸಂಸ್ಥಾಪಕರೂ, ಶ್ರೀ ಲಲಿತ ಎಜುಕೇಷನಲ್ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್‌ನ, ಕಾರ್ಯದರ್ಶಿಗಳೂ,

ಎಸ್.ಪಿ. ಸಾರ್ವಜನಿಕ ಮಾಹಿತಿ ಹಾಗೂ ಗ್ರಾಹಕರ ಸೇವಾ ಕೇಂದ್ರದ ಮಾಲೀಕರೂ, ದಾವಣಗೆರೆ ಮಹಾನಗರ ಪಾಲಿಕೆಯ 12ನೇ ವಾರ್ಡ್‌ನ ಕಾಂಗ್ರೆಸ್ ಮುಖಂಡರು, ಕಾಂಗ್ರೆಸ್ ಜಿಲ್ಲಾ ಎಸ್.ಸಿ. ಘಟಕದ ಸಂಘಟನಾ ಕಾರ್ಯದರ್ಶಿಗಳೂ, "ಕದಂಬ ಕ್ರಾಂತಿ" ಹಾಗೂ "ಕದಂಬ ಕೇಸರಿ" ದಿನ ಪತ್ರಿಕೆಯ ಸಂಪಾದಕರು ಹಾಗೂ ನಮ್ಮ ಆತ್ಮೀಯ ಸಹೋದರರೂ ಆದ

**ಶ್ರೀ ಸೂರ್ಯಪ್ರಕಾಶ್ ಆರ್.** ಮತ್ತು **ಶ್ರೀಮತಿ ಸುಮಲತ ಜಿ.ಎಸ್.**

ದಂಪತಿಗೆ ವಿವಾಹ ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು....

ಬಂಧುಗಳು ಮತ್ತು ಮಿತ್ರರು

## ಎಸ್‌ಬಿಸಿ ಕಾಲೇಜು -ಅಥಣಿ ಕೇಂದ್ರಕ್ಕೆ ಎರಡು ರ‍್ಯಾಂಕ್



ದಾವಣಗೆರೆ, ಫೆ. 13 - ನಗರದ ಎಸ್.ಬಿ.ಸಿ. ಮಹಿಳಾ ಕಾಲೇಜು ಮತ್ತು ಅಥಣಿ ಸ್ನಾತಕೋತ್ತರ ಕೇಂದ್ರಕ್ಕೆ ದಾವಣಗೆರೆ ವಿಶ್ವವಿದ್ಯಾನಿಲಯದ ಎಂ.ಎ ಇಂಗ್ಲಿಷ್ ವಿಭಾಗದಲ್ಲಿ 2023-24ನೇ ಸಾಲಿನಲ್ಲಿ ವಿದ್ಯಾರ್ಥಿನಿಯರಾದ ಖಾನ್ ಹಮೀದಾ 3ನೇ ರ‍್ಯಾಂಕ್ ಮತ್ತು ಪೂರ್ಣಿಮಾ ವಿ.ಎಸ್. 5ನೇ ರ‍್ಯಾಂಕ್ ಗಳಿಸಿರುತ್ತಾರೆ. ರ‍್ಯಾಂಕ್ ಗಳಿಸಿ ಕಾಲೇಜಿಗೆ ಕೀರ್ತಿ ತಂದ ವಿದ್ಯಾರ್ಥಿನಿಯರುಗಳಿಗೆ ವಿನಾಯಕ ಎಜುಕೇಷನ್ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಶೈಲ ಜಗದ್ಗುರುಗಳು, ಅಥಣಿ ಸ್ನಾತಕೋತ್ತರ ಕೇಂದ್ರದ ಮ್ಯಾನೇಜಿಂಗ್ ಟ್ರಸ್ಟಿ ಹಾಗೂ ಅಧ್ಯಕ್ಷ ಅಥಣಿ ವೀರಣ್ಣ, ಎಸ್.ಬಿ.ಸಿ ಕಾಲೇಜಿನ ಅಧ್ಯಕ್ಷ ಬಿ.ಸಿ ಉಮಾಪತಿ, ಕಾರ್ಯದರ್ಶಿ ಎನ್.ಎ ಮುರುಗೇಶ್ ಹಾಗೂ ಟ್ರಸ್ಟಿನ ಎಲ್ಲಾ ಸದಸ್ಯರುಗಳು ಹಾಗೂ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಅಭಿನಂದಿಸಿದ್ದಾರೆ.


## ಹೃತ್ಪೂರ್ವಕ ಕೃತಜ್ಞತೆಗಳು



ಜಿ. ಶಿವಕುಮಾರ್
ಅಧ್ಯಕ್ಷರು, ಬಸಾಪುರ.

ಆನೆಕೊಂಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ **ಜಿ. ಶಿವಕುಮಾರ್** ಹಾಗೂ ಉಪಾಧ್ಯಕ್ಷರಾಗಿ **ಶ್ರೀಮತಿ ಪಾರ್ವತಮ್ಮ** ಅವರುಗಳನ್ನು ಅವಿರೋಧವಾಗಿ ಆಯ್ಕೆ ಮಾಡಿರುವುದಕ್ಕೆ **ಹೃತ್ಪೂರ್ವಕ ಕೃತಜ್ಞತೆಗಳು.** ಹಾಗೂ ಚುನಾವಣಾಧಿಕಾರಿಯಾದ **ಶ್ರೀ ಸಿ.ಜಿ. ಜಗದೀಶ್** ಹಾಗೂ ಸಿಇಓ **ಜೆ.ಎನ್. ಪ್ರಭು ಇವರಿಗೂ** ಕೃತಜ್ಞತೆಗಳು...



ಶ್ರೀಮತಿ ಪಾರ್ವತಮ್ಮ
ಉಪಾಧ್ಯಕ್ಷರು, ಬಸಾಪುರ.



ಕೆ.ಹೆಚ್. ಪ್ರಕಾಶ್ – ನಿರ್ದೇಶಕರು, ಲಿಂಗದಹಳ್ಳಿ
ಎಸ್. ಬಸವರಾಜ್ – ನಿರ್ದೇಶಕರು, ಆನೆಕೊಂಡ
ಆರ್.ಜಿ. ನರೇಂದ್ರ – ನಿರ್ದೇಶಕರು, ರಾಂಪುರ
ಟಿ. ಚನ್ನಪ್ಪ – ನಿರ್ದೇಶಕರು, ಬಸಾಪುರ
ಬಿ.ಎಂ. ಬಕ್ಕಯ್ಯ – ನಿರ್ದೇಶಕರು, ಬಸಾಪುರ



ಜಿ. ತಿಪ್ಪೇಸ್ವಾಮಿ – ನಿರ್ದೇಶಕರು, ಬಸಾಪುರ
ವೀಣಾ ಬಿ.ವಿ. – ನಿರ್ದೇಶಕರು, ಬಸಾಪುರ
ಬಿ. ಮೌನೇಶ್ವರಾಚಾರಿ – ನಿರ್ದೇಶಕರು, ಬಸಾಪುರ
ಮೂಗಪ್ಪ – ನಿರ್ದೇಶಕರು, ಬಸಾಪುರ
ಬಿ.ಕೆ. ಕರಿಬಸಪ್ಪ – ನಿರ್ದೇಶಕರು, ಬಸಾಪುರ

**ದಿನಾಂಕ : 13.02.2025 ರಂದು ನಡೆದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ಆನೆಕೊಂಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹಾಗೂ ನಿರ್ದೇಶಕರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲು ಸಹಕರಿಸಿದ ಆನೆಕೊಂಡ, ಬಸಾಪುರ, ರಾಂಪುರ, ಲಿಂಗದಹಳ್ಳಿ, ದಾವಣಗೆರೆ ನಗರ, ಗ್ರಾಮದ ಎಲ್ಲಾ ಹಿರಿಯರಿಗೂ ಹಾಗೂ ಸರ್ವ ಸದಸ್ಯರಿಗೂ**

**ಹೃದಯ ಪೂರ್ವಕ ಕೃತಜ್ಞತೆಗಳು.**


## ಶ್ರೀಮತಿ ಶಕುಂತಲಮ್ಮ ನಿಧನ



ದಾವಣಗೆರೆ ಕುಂದುವಾಡ ರಸ್ತೆಯಲ್ಲಿರುವ ವಿನಾಯಕ ನಗರದ 1ನೇ ಅಡ್ಡರಸ್ತೆ ವಾಸಿ ಜೋಗಪ್ಪನವರ ದಿ|| ಓಂಕಾರಪ್ಪನವರ ಧರ್ಮಪತ್ನಿ **ಶ್ರೀಮತಿ ಶಕುಂತಲಮ್ಮ** ಇವರು ದಿನಾಂಕ 13-02-2025ರ ಗುರುವಾರ ಬೆಳಿಗ್ಗೆ 7.15ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 65 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರಿ, ಮೂವರು ಪುತ್ರರು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14-02-2025ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : **ಜೋಗಪ್ಪನವರ ಕುಟುಂಬದವರು ಮತ್ತು ಬಂಧು-ಮಿತ್ರರು.**


## LAUNCH OF ALL NEW CHETAK 35 Series

THE BEST CHETAK YET

Date : 14th Feb.
Time : 4:00pm




CHETAK DAVANGERE : 80950-55555



## ಶ್ರೀ ಶ್ರೀ ಶ್ರೀ ಸಂತ ಸದ್ಗುರು ಸೇವಾಲಾಲ್ ಮಹಾರಾಜ್‌ರವರ 286ನೇ ಜಯಂತ್ಯೋತ್ಸವ









**ಶುಭ ಕೋರುವವರು : ಬಂಜಾರ ಸಮಾಜದ ಮುಖಂಡರುಗಳು**



## ಸಂಚಿತ ಕ್ರೆಡಿಟ್ ಕೋ-ಆಪ್. ಸೊಸೈಟಿ ಲಿ.


ಮುರುಘರಾಜೇಂದ್ರ ಕಾಂಪ್ಲೆಕ್ಸ್, ನಿಟುವಳ್ಳಿ ರಸ್ತೆ, ದಾವಣಗೆರೆ-02

### ಸಂಘದ ನೂತನ ಆಡಳಿತ ಮಂಡಳಿ ಸದಸ್ಯರುಗಳು



ಟಿ.ಎಂ.ಪಾಲಾಕ್ಷ
ಅಧ್ಯಕ್ಷರು


ಸೊಸೈಟಿಯ ಮುಂದಿನ ಐದು ವರ್ಷಗಳ ಕಾಲ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯನ್ನು ಚುನಾವಣಾಧಿಕಾರಿ **ಶ್ರೀಮತಿ ಭಾಗ್ಯಶ್ರೀ ಎಸ್. ಪಾಟೀಲ್** ಹಾಗೂ ಕಾರ್ಯದರ್ಶಿ **ಜೆ. ವಿಜಯ್‌ಕುಮಾರ್** ಇವರುಗಳ ಉಪಸ್ಥಿತಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.



ಪಿ.ಎಂ. ವೀರಭದ್ರಯ್ಯ
ಉಪಾಧ್ಯಕ್ಷರು



ಪಿ. ಹೇಮಲತಾ – ನಿರ್ದೇಶಕರು
ಜೆ.ಸಂಜಯ್ ಕುಮಾರ್ – ನಿರ್ದೇಶಕರು
ಎನ್.ಹೆಚ್. ಪ್ರಕಾಶಚಾರಿ – ನಿರ್ದೇಶಕರು
ಎಸ್.ವಿ. ರುದ್ರಮುನಿ – ನಿರ್ದೇಶಕರು
ಜಿ.ವೈ. ಭೋಜರಾಜ್ – ನಿರ್ದೇಶಕರು



ಎಂ.ಎಂ. ರಾಜಶ್ರೀ – ನಿರ್ದೇಶಕರು
ವಿ.ಹೆಚ್. ಕುಮಾರ್ – ನಿರ್ದೇಶಕರು
ಡಾ. ಪಿ.ಎಂ.ಶಿವಕುಮಾರ್ – ನಿರ್ದೇಶಕರು
ಪಿ.ಎನ್. ಕೊಟ್ರೇಶ್ – ನಿರ್ದೇಶಕರು
ಸಿ. ನರಸಿಂಹಮೂರ್ತಿ – ನಿರ್ದೇಶಕರು

**ಶುಭ ಕೋರುವವರು :** ಸಿಬ್ಬಂದಿ ವರ್ಗ : + ವಿಜಯಕುಮಾರ ಜೆ. + ಚಂದ್ರಕಲಾ ಜೆ.ಹೆಚ್. + ವಿನಯ ಟಿ.ಎಂ. + ವಿಜಯಕುಮಾರ ಹೆಚ್.ಜಿ. + ಶಶಿಕುಮಾರ್ ಜಿ.ಕೆ.
ಹಾಗೂ ಪಿಗ್ಮಿ ಏಜೆಂಟರು : + ಕೊಟ್ರಬಸಪ್ಪ ಡಿ.ಎಂ. + ಜಗದೀಶ್ ಹೆಚ್.ಎಸ್. + ಕೃಷ್ಣಭಟ್ ಎನ್.ಎಸ್. + ಕಮಲ ಸೋಮಶೇಖರ್ ಎಸ್. + ಶಿವಯೋಗಪ್ಪ ಪಿ. + ಮಂಜುಳ ಮುರುಗೇಶ + ಮುರುಗೇಶಪ್ಪ ಎನ್.


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas